# ಗಾಂಧಿಯನ್ನು ಗೋಡ್ಸೆ ಏಕೆ ಕೊಂದ?

ಮೂಲ

ವಿ. ಟಿ. ರಾಜಶೇಖರ್

ಅನುವಾದ

ಭಗವಾನ್

ಬಿ. ನಟೇಶ್

**ದಲಿತ ಸಾಹಿತ್ಯ ಅಕಾದೆಮಿ**

೧೮೯/ ೭ನೇ ಕ್ರಾಸ್, ಪ್ಯಾಲೆಸ್ ಲೋಯರ್ ಆರ್ಚರ್ಡ್ಸ್

ಬೆಂಗಳೂರು–೫೬೦ ೦೦೩

೧೯೮೫

# ಗಾಂಧಿಯನ್ನು ಗೋಡ್ಸೆ ಏಕೆ ಕೊಂದ ?

ಅಂತರ ರಾಷ್ಟ್ರೀಯ ಖ್ಯಾತಿಗಳಿಸಿದ ಲಕ್ಷಾಂತರ ಡಾಲರುಗಳ ವೆಚ್ಚದಿಂದ ನಿರ್ಮಿತವಾದ 'ಗಾಂಧಿ' ಚಿತ್ರವು, ನಾತುರಾಮ್ ಗೋಡ್ಸೆ, ಗಾಂಧಿಯನ್ನು ಪಿಸ್ತೂಲಿನಿಂದ ಹೊಡೆದು ಕೊಲ್ಲುವ ಘಟನೆಯಿಂದ ಪ್ರಾರಂಭವಾಗಿ, ಅದ ರಿಂದಲೇ ಮುಕ್ತಾಯವಾಗುತ್ತದೆ. ಗೋಡ್ಸೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಯಕನಾಗಿದ್ದನು. ಅವನು 'ರಾಷ್ಟ್ರಪಿತ'ನನ್ನು ಏಕೆ ಕೊಂದನೆಂದು ಚಿತ್ರ ಹೇಳುವುದಿಲ್ಲ ಭಾರತದಲ್ಲೂ ಹೊರದೇಶಗಳಲ್ಲೂ ಈ ಚಿತ್ರವು ಗಾಂಧೀಜಿಯವರ ಬಗ್ಗೆ ಅಪಾರ ಆಸಕ್ತಿಯನ್ನು ಕೆರಳಿಸಿದೆ. ಆದರೆ ಅವರನ್ನು ಕೊಂದದ್ದು ಏಕೆ ಎಂಬ ಬಗೆಗೆ ವರದಿಯಾಗಲೀ, ಚರ್ಚೆಯಾಗಲೀ ಪ್ರಕಟವಾ ಗಿಲ್ಲ. ಪ್ರತಿಕೂಲವಾದ ಪ್ರಶ್ನೆಯನ್ನು ಕಡೆಗಣಿಸುವುದೇ ಹಿಂದೂ ಮನಸ್ಸಿನ ಮರ್ಜಿ. ಆದರೆ ಗೋಡ್ಸೆ ಸ್ವತಃ ಬರೆದಿರುವ ನೂರಇಪ್ಪತ್ತೆರಡು ಪುಟಗಳ ಪುಸ್ತಕದಲ್ಲಿ ತಾನು ಗಾಂಧಿಯನ್ನು ಏಕೆ ಕೊಂದೆ ಎಂಬುದರ ಬಗ್ಗೆ ವಿವರಿಸಿದ್ದಾನೆ.

ಅದು 'ಮಹಾಸನ್ನಿಧಿಗೆ ಮನವಿ' (May It Please Your Honour) ಎಂಬ ಪುಸ್ತಕ. ನಿಷಿದ್ಧವಾಗಿದೆಯೆಂದು ಹೇಳಲಾದ ಈ ಕೃತಿ 1977ರಲ್ಲಿ ಅವನ ತಮ್ಮ ಗೋಪಾಲ ಗೋಡ್ಸೆಯಿಂದ ಮೊದಲು ಪ್ರಕಾಶಿತ ವಾಯಿತು. ಇದುವರೆಗೆ ಈ ಕೃತಿಯು ಅನೇಕ ಸಾರಿ ಮುದ್ರಿತವಾಗಿದೆ. ಭಾರತ ದಲ್ಲಿರುವ ಗೋಡ್ಸೆಯ ಸಾವಿರಾರು ಅಭಿಮಾನಿಗಳಲ್ಲಿ ರಹಸ್ಯವಾಗಿ ಪ್ರಚಾರಿತ ವಾಗುತ್ತಿದೆ. ಪುಸ್ತಕವನ್ನು ಓದುವುದರಿಂದ ತನ್ನ ವಾದವನ್ನು ಬಹು ಪ್ರಬಲ ವಾಗಿ ಗೋಡ್ಸೆ ಮಂಡಿಸಿದ್ದಾನೆಂದೂ ಅವನು ಮಾಡಿದ್ದು ಸರಿಯೆಂದೂ

ಯಾರಿಗೇ ಆದರೂ ಮನದಟ್ಟಾಗುತ್ತದೆ. ಬ್ರಾಹ್ಮಣ ಧರ್ಮದ ಬಗ್ಗೆ ಗೋಡ್ಸೆಗಿದ್ದ ಭಕ್ತಿಯನ್ನೂ ತನ್ನ ಪ್ರಾಣವನ್ನು ಕೊಟ್ಟು ಅದನ್ನು ಸಮರ್ಥಿಸುವುದನ್ನೂ ಮೆಚ್ಚಲೇಬೇಕು. ತನ್ನ ಉದ್ದೇಶಗಳನ್ನು ಮರೆ ಮಾಚದಿರುವುದೇ ಗೋಡ್ಸೆಯ ದೊಡ್ಡಸ್ತಿಕೆ. ಆದ್ದರಿಂದ, ಈ ಕೃತಿ ಸದ್ಯದಲ್ಲಿ ವೈದಿಕ ಪರಂಪರೆ ಮತ್ತು ಬ್ರಾಹ್ಮಣಧರ್ಮವನ್ನು ಮರೆಮಾಚುತ್ತಿರುವ, ಮಾರ್ಕ್ಸ್‌ವಾದದ ಸೋಗಿನಲ್ಲಿ ಮಾತನಾಡುವ ಆರೆಸೆಸ್‌ನಾಯಕರು ಮತ್ತು ಇತರ ಬ್ರಾಹ್ಮಣ ನಾಯಕರಿಗೆ ಇರುವ ವೈದೃಶ್ಯದ ಅಧ್ಯಯನವಾಗಿದೆ.

ಆದ್ದರಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೈಬಲ್ ಎಂದು ಖ್ಯಾತವಾಗಿರುವ 'ಚಿಂತನ ಗಂಗಾ' (Bunch of Thoughts)ದ ಕರ್ತೃ ಗುರು ಗೋಲ್ವಾಲ್ಕರರ ಅತ್ಯಂತ ನಿಷ್ಠಾವಂತ ಅನುಯಾಯಿಗಳಲ್ಲಿ ಗೋಡ್ಸೆ ಒಬ್ಬನೆಂದು ಪರಿಗಣಿಸಬಹುದು. ನ್ಯಾಯಾಲಯದಲ್ಲಿ ಗೋಡ್ಸೆ ಕೊಟ್ಟ ಹೇಳಿಕೆಯೇ ಈ ಕೃತಿ. ಬ್ರಾಹ್ಮಣ ಧರ್ಮಕ್ಕೆ ಗಾಂಧೀಜಿ ಸಲ್ಲಿಸಿದ ಸೇವೆಗಾಗಿ ಬ್ರಾಹ್ಮಣರು ಅವರಿಗೆ 'ಮಹಾತ್ಮಾ' ಬಿರುದು ಕೊಟ್ಟರು. ಆದರೆ ಗೋಡ್ಸೆ ಗಾಂಧೀಜಿಯನ್ನು 'ಮಹಾತ್ಮಾ' ಎಂದು ಸಂಬೋಧಿಸುವುದೇ ಇಲ್ಲ. ಬ್ರಾಹ್ಮಣಧರ್ಮವನ್ನು ಅಧ್ಯಯನ ಮಾಡಲು ಆಸಕ್ತಿ ಇರುವ ಎಲ್ಲರೂ ಬ್ರಾಹ್ಮಣ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂದು ತಿಳಿಯಲೂ, 'ಭಾರತದ ಯಹೂದಿ'ಗಳೆಂದು ಹೆಸರಾದ ಜನರು ಗಾಂಧಿಯನ್ನು ಹೇಗೆ ಉಪಯೋಗಿಸಿಕೊಂಡರು, ಅವನನ್ನು ಹೇಗೆ ಕೊಂದರು ಮತ್ತು ಕೊಂದ ಮೇಲೆ ಗಾಂಧಿವಾದವನ್ನೇ ಭಾರತದ ಆಳುವ ವರ್ಗದ ತತ್ವವನ್ನಾಗಿ ಒಪ್ಪಿಕೊಂಡರು ಎಂದು ತಿಳಿಯುವುದೂ ಸೂಕ್ತ.

ಭಾರತದ ಅಸಂಖ್ಯಾತ ಅಸ್ಪೃಶ್ಯರ ಮಹಾನಾಯಕ ಡಾ॥ ಅಂಬೇಡ್ಕರ್ ಅವರು ಮಹಾತ್ಮಾಗಾಂಧಿ ಎನ್ನುವುದಕ್ಕೆ ಬದಲಾಗಿ ಶ್ರೀಮಾನ್ ಎಂ.ಕೆ.ಗಾಂಧಿ ಎಂದು ಸಂಬೋಧಿಸಿದ್ದಕ್ಕೆ ಕೆಲವು ಹಿಂದೂ ನಾಯಕರು ಟೀಕಿಸಿದ್ದರು. ಆದರೆ ಗೋಡ್ಸೆ ಹಿಂದೂ ಧರ್ಮವನ್ನು ಉಳಿಸುವುದಕ್ಕಾಗಿ ಗಾಂಧಿಯನ್ನು ಕೊಂದು ಶ್ರೀ ಎಂಬ ಮಾತನ್ನೂ ಬಳಸಲಿಲ್ಲ. ತಾನು ಮಾಡಿದ್ದು ಸರಿ,ಇತರರು ಮಾಡಿದ್ದು ತಪ್ಪು ಎನ್ನುವುದೇ ಬ್ರಾಹ್ಮಣ ನೀತಿ. ತಪ್ಪೆಂದು ತೀರ್ಮಾನಿಸುವವರು ಯಾರು ? ಪೊಲೀಸೂ ಅವರೇ, ನ್ಯಾಯಾಧೀಶರೂ ಅವರೇ, ನೇಣುಗಂಬಕ್ಕೇರಿಸುವವರೂ ಅವರೇ - ಎಲ್ಲಾ ಅವರೇ ಆಗಿದ್ದಾರೆ.

ಆತ್ಮಚರಣ ಅಗರವಾಲ ಎಂಬ ಐ.ಸಿ.ಎಸ್. ಅಧಿಕಾರಿಯ ನೇತೃತ್ವದಲ್ಲಿ ವಿಶೇಷ ನ್ಯಾಯಾಲಯವನ್ನು ಸರ್ಕಾರವು ರಚಿಸಿತು. ದೆಹಲಿಯ ಇತಿಹಾಸ ಪ್ರಸಿದ್ಧ ಕೆಂಪು ಕೋಟೆಯಲ್ಲಿ ಅದು ಕುಳಿತು ವಿಚಾರಣೆ ನಡೆಸಿತು. ಮಹಾ ದೊಡ್ಡ ರಾಷ್ಟ್ರವಾದಿಯೆಂದು ಆರೆಸೆಸ್ ವರ್ಣಿಸುವ ಪ್ರಸಿದ್ಧ ವೀರಸಾವರ್ಕರ್ ಸೇರಿದಂತೆ ಹನ್ನೆರಡು ಮಂದಿ ಅಪರಾಧಿಗಳಿದ್ದರು.

ಮುಸ್ಲಿಮರ ಬಗ್ಗೆ ಬ್ರಾಹ್ಮಣರ ದ್ವೇಷ ಎಂಥದು ಎಂದು ತಿಳಿಯಲು ಈ ಪುಸ್ತಕ ಅತ್ಯಂತ ಪ್ರಮಾಣಭೂತ ದಾಖಲೆಯಾಗಿದೆ. ಇಸ್ಲಾಂ ಮತ್ತು ಬ್ರಾಹ್ಮಣ ಧರ್ಮಗಳು ಸರ್ಪ ಹಾಗೂ ಮುಂಗುಸಿಯಂತಿವೆ.

ತಮ್ಮ ಸ್ವಾರ್ಥ ಸಾಧನೆಗಾಗಿ ಈಗ ಆರೆಸೆಸ್ ನಾಯಕರು ಗಾಂಧಿಯನ್ನು ಆರಾಧಿಸಬಹುದು ; ಅವರ ರಾಜಕೀಯ ಪಕ್ಷವಾದ ಬಿ ಜೆ ಪಿ ಯು ಗಾಂಧಿ ವಾದವನ್ನು ತನ್ನ ರಾಜಕೀಯ ತತ್ವವನ್ನಾಗಿ ಅಂಗೀಕರಿಸಿರಬಹುದು. ಆದರೆ ಗಾಂಧಿ ಹಿಂದೂ ವಿರೋಧಿಯೆಂದು ಗೋಡ್ಸೆ ಸ್ಪಷ್ಟವಾಗಿ ಹೇಳಿದ್ದಾನೆ. ಭಾರತದಲ್ಲಿ ಹಿಂದೂ ವಿರೋಧಿಯಾದವನು ರಾಷ್ಟ್ರವಿರೋಧಿಯಾಗುತಾನೆ. ಈ ಪುಸ್ತಕಕ್ಕೆ ಬರೆದಿರುವ ಮುನ್ನುಡಿಯಲ್ಲಿ [ಯಾರದೆಂದು ಹೆಸರಿಸಿಲ್ಲ] ಗೀತೆಯನ್ನು ಕುರಿತ ಗಾಂಧಿಯ ವಿಚಾರಧಾರೆ ತಪ್ಪುತಪ್ಪಾಗಿದೆ ; ಪೂನಾದ ಚಿತ್ಪಾವನ ಬ್ರಾಹ್ಮಣ ಬಾಲ ಗಂಗಾಧರ ತಿಲಕರ ಪ್ರಮಾಣಭೂತ ವ್ಯಾಖ್ಯಾನಕ್ಕೆ ವಿರುದ್ಧ ವಾಗಿದೆ ಎಂದು ಬರೆದಿದೆ.[ಕಾಲಿನ್ಸ್ ಮತ್ತು ಲ್ಯಾಪಿಯರ್ ಅವರ 'ಫ್ರೀಡಮ್ ಅಟ್ ಮಿಡ್‌ನೈಟ್' 'ನಮರಾತ್ರಿಯಲ್ಲಿ ಸ್ವಾತಂತ್ರ್ಯ' – ಎಂಬ ಪುಸ್ತಕದಲ್ಲಿ 359ನೇಪುಟದಿಂದ 375ನೇ ಪುಟದವರೆಗೆ ಇರುವ Two Brahmins from Poona ಎಂಬ ಭಾಗವನ್ನು ಓದಿ]

ಹಿಂದೂ ಪುನರುತ್ಥಾನ ಚಳವಳಿಯನ್ನು ಮೊದಲು ಪ್ರಾರಂಭಿಸಿದವರು ತಿಲಕರು. ಆರೆಸೆಸನ್ನು ಸ್ಥಾಪಿಸಿದ ಚಿತ್ಪಾವನ ಬ್ರಾಹ್ಮಣ ವೀರಸಾವರ್ಕರ್ ತಿಲಕರ ಶಿಷ್ಯನಾಗಿದ್ದನು. ಗುಜರಾತಿ ಬನಿಯನಾದ ಗಾಂಧಿಯ ಬೆಳೆಯುತ್ತಿದ್ದ ಜನಪ್ರಿಯತೆಯನ್ನು ಕಂಡು ತಿಲಕ್ ಅಸಂತೃಪ್ತಿ ವ್ಯಕ್ತಪಡಿಸಿ, ಬ್ರಾಹ್ಮಣರ ಕೈಯಿಂದ ಅಬ್ರಾಹ್ಮಣರ ಕೈಗೆ 'ರಾಷ್ಟ್ರೀಯ ಚಳವಳಿ' ಹೋಗದಂತೆ ತಡೆಗಟ್ಟ ಬೇಕೆಂದು 'ರಾಷ್ಟ್ರೀಯವಾದಿ' ಗಳನ್ನು ತಿಲಕರು ಕೇಳಿಕೊಂಡರು. ಗಾಂಧಿ ಯನು ದ್ವೇಷಿಸುವ, ಅವನನ್ನು ಕೊನೆಗೆ ಕೊಲ್ಲುವ ಬ್ರಾಹ್ಮಣರ ಹಿಕಮತ್ತಿನ

ಗುಟ್ಟು ಇದು. ಗಾಂಧಿ ಚಿತ್ರವನ್ನು ತಯಾರಿಸಿದ ರಿಚರ್ಡ್ ಆಟೆನ್‌ಬರೋ ಅವರಿಗೆ ಇದನ್ನು ಹೇಳಲು ಧೈರ್ಯವಾಗಿಲ್ಲ. ಏಕೆಂದರೆ ಅದಕ್ಕೆ ಹಣವನ್ನು ಒದಗಿಸಿದವರು ಇನ್ನೊಬ್ಬ ಬ್ರಾಹ್ಮಣ.

ವರ್ಷಗಳ ಕಾಲ ಗೀತೆಯನ್ನು ಹಾಡಿಹೊಗಳಿದ ರಾಮನಾಮವನ್ನು ಜಪಿಸಿದ ಗಾಂಧಿಯನ್ನು. ಸಂಪ್ರದಾಯಸ್ಥ ಬ್ರಾಹ್ಮಣರು ದ್ವೇಷಿಸಿ, ಕೊನೆಗೆ ಕೊಂದರೆಂದು ಇದರಿಂದ ಸ್ಪಷ್ಟವಾಗುವುದಿಲ್ಲವೆ ? ಗಾಂಧಿ ಪ್ರತಿನಿಧಿಸಿದ ಎಲ್ಲವನ್ನು ಸಾವರ್ಕರ್ ಮತ್ತು ಗೋಲ್ವಾಲ್ಕರ್ ದ್ವೇಷಿಸಿದರು. ಗಾಂಧಿಯನ್ನು ಹಿಂದೂ ವಿರೋಧಿ ಎಂದೂ ರಾಷ್ಟ್ರದ್ರೋಹಿ ಎಂದೂ ಘೋಷಿಸಿದರು. ಜವಾಹರಲಾಲ ನೆಹರೂ ಅವರ ಮುಂದಾಳುತನದಲ್ಲಿ 'ಸಮಾಜವಾದಿ ಬ್ರಾಹ್ಮಣರು' ಗಾಂಧೀಜಿಯ ನಾಯಕತ್ವವನ್ನು ಒಪ್ಪಿಕೊಂಡರು. ಏಕೆಂದರೆ ಮಹಾತ್ಮನನ್ನು ಸಂಪೂರ್ಣವಾಗಿ ಶೋಷಿಸುವುದೇ ಅವರ ಉದ್ದೇಶವಾಗಿತ್ತು. ಬ್ರಾಹ್ಮಣರಿಗೆ ಯಾವುದೇ ಶಾಶ್ವತ ಪಕ್ಷವಿಲ್ಲ, ಆದರೆ ಶಾಶ್ವತ ಆಸಕ್ತಿ ಉಂಟು. ಅದು ಇಂದಿಗೂ ನಿಜ. ಆದ್ದರಿಂದಲೇ ಅವರು ಎಲ್ಲಾ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ ಇಡುವುದಿಲ್ಲ. ಎಲ್ಲ ಪಕ್ಷಗಳಲ್ಲಿಯೂ ಅವರು ಚದುರಿ ಹೋಗಿದ್ದಾರೆ. ಸಿ.ಪಿ.ಎಂ., ಸಿ.ಪಿ.ಐ ಇವುಗಳನ್ನು ಪರಿಶೀಲಿಸಿ.

ಗಾಂಧಿ ಕೊಲೆ (ಜನವರಿ 30, 1948)ಯ ಬಗ್ಗೆ ಮೊದಲೇ ವಿಷಯ ತಿಳಿದಿದ್ದ ಆರೆಸೆಸ್ ಗಾಂಧಿ ಕೊಲೆಯಾದ ಕೆಲವು ಕ್ಷಣಗಳಲ್ಲಿಯೇ ಭಾರತದ ಎಲ್ಲ ಕಡೆಗಳಲ್ಲೂ ಸಿಹಿ ಹಂಚಿತು. ಆದರೆ ಉದ್ರಿಕ್ತ ಜನರು ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಅನೇಕ ಚಿತ್ಪಾವನ ಬ್ರಾಹ್ಮಣರ ಮನೆಗೆ ಬೆಂಕಿ ಹಾಕಿದರು. ಆರೆಸೆಸ್‌ನವರ ವಾಸ್ತವ ಯೋಜನೆ ಗಾಂಧಿ ಕೊಲೆಯ ದೋಷವನ್ನು ಮುಸ್ಲಿಮರ ಮೇಲೆ ಹಾಕುವುದಾಗಿತ್ತು; ಭಾರತದ ಅನೇಕ ಭಾಗಗಳಲ್ಲಿ ಮುಸ್ಲಿಮರ ಅಂಗಡಿಗಳಿಗೂ ಮನೆಗಳಿಗೂ ಆರೆಸೆಸ್ ಮುತ್ತಿಗೆ ಹಾಕಿತು, ಜಾಗೃತದಳಕ್ಕೆ ಈ ಕೊಲೆಯ ಖಚಿತ ತಿಳಿವಳಿಕೆ ಇತ್ತು. ಗೃಹಮಂತ್ರಿಯಾಗಿದ್ದ ವಲ್ಲಭಾಯಿ ಪಟೇಲ್ ಮತ್ತು ಹಿಂದಿನ ಬಾಂಬೆ ಪ್ರಾಂತದ ಸರ್ಕಾರದಲ್ಲಿ ಗೃಹಮಂತ್ರಿಯಾಗಿದ್ದ ಮೊರಾರ್ಜಿ ದೇಸಾಯಿಯವರಿಗೆ ಮೊದಲೇ ವಿಷಯ ಗೊತ್ತಿತ್ತು. ಗಾಂಧಿ ಬ್ರಾಹ್ಮಣರಿಗೆ ನುಂಗಲಾರದ ತುತ್ತಾಗಿದ್ದರು. ಭಾರತದ ಮೇಲಿನ ಹಿಡಿತವನ್ನು ಬ್ರಿಟಿಷರಿಂದ ಪಡೆದಿದ್ದ ಅವರು ತಮಗೆ ಅಡ್ಡಿಯಾಗಿದ್ದ ಗಾಂಧಿ

ಯನ್ನು ಮುಗಿಸಲು ಬಯಸಿದರು. ಆದರೆ ಭಾರತದ ನಿಜವಾದ ಇತಿಹಾಸವನ್ನು ಇನ್ನೂ ಬರೆಯಬೇಕಾಗಿದೆ.

ತಮಿಳುನಾಡಿನ ಕೆಲವು ಭಾಗಗಳಲ್ಲಿ ಮುಸ್ಲಿಂ ವಿರೋಧಿ ಕೋಮು ಗಲಭೆಗಳು ಶುರುವಾದವು. ಭಯಭೀತರಾದ ಮುಸ್ಲಿಮರು ರಕ್ಷಣೆಗಾಗಿ ಪೆರಿಯಾರ್ ಇ. ವಿ. ರಾಮಸ್ವಾಮಿಯವರ ಬಳಿ ಓಡಿದರು. ಮದರಾಸಿನ ಆಕಾಶವಾಣಿ ನಿಲಯಕ್ಕೆ ಪೆರಿಯಾರ್ ಹೋಗಿ ಗಾಂಧಿಯನ್ನು ಕೊಂದದ್ದು ಮುಸ್ಲಿಮನಲ್ಲ, ವಾಸ್ತವವಾಗಿ ಒಬ್ಬ ಬ್ರಾಹ್ಮಣ ಎಂದು ಆಕಾಶವಾಣಿಯಲ್ಲಿ ಘೋಷಿಸಿದರೆಂದು ದ್ರಾವಿಡ ಕಳಗಂನ ಮೂಲಗಳು ತಿಳಿಸುತ್ತವೆ. ಅವರ ಮನವಿಯ ನಂತರ ಮುಸ್ಲಿಂ ವಿರೋಧೀ ಗಲಭೆಗಳು ನಿಂತವು. ಬಾಂಬೆಯಲ್ಲಿ ಜನರ ಗುಂಪು ಸಾವರ್ಕರರ ಮನೆಯನ್ನು ದಾಳಿಮಾಡಿತು. ಭಾರತದ ಎಲ್ಲ ಕಡೆಗಳಲ್ಲೂ ಆರೆಸೆಸ್‌ನ ಕಛೇರಿಗಳು ದಾಳಿಯಾದವು. ಗೋಡ್ಸೆ ಆರೆಸೆಸ್‌ಗೆ ಸೇರಿರಲಿಲ್ಲವೆಂದು ನ್ಯಾಯಾಲಯ ತೀರ್ಪು ನೀಡಿದರೂ ಇಂದಿಗೂ ಗಾಂಧಿಯನ್ನು ಕೊಂದದ್ದು ಆರೆಸೆಸ್ ಎಂಬ ಕಳಂಕವನ್ನು ಹೊತ್ತುಕೊಂಡೇ ಅದು ಬದುಕಬೇಕಾಗಿದೆ. ಗಾಂಧಿ ಕೊಲೆಯ ಕೇಸಿನಲ್ಲಿ ಎರಡನೆಯ ಅಪರಾಧಿ ನಾರಾಯಣ ಆಪ್ಟೆ; ಆತ ಕಾಮುಕ ಬ್ರಾಹ್ಮಣ, ಉಪಾಧ್ಯಾಯ. ಸಾವರ್ಕರ್‌ಗೆ ವಿಮೋಚನೆಯಾಯಿತು. 1966 ರಲ್ಲಿ ಅವರು ಸತ್ತರು.

1949ನೇ ಇಸವಿ ನವೆಂಬರ್ 15ನೇ ತಾರೀಖು ಅಂಬಾಲದಲ್ಲಿ ಗೋಡ್ಸೆ ಮತ್ತು ಆಪ್ಟೆಯನ್ನು ನೇಣುಹಾಕಲಾಯಿತು. ಗೋಡ್ಸೆ ತನ್ನ ಮೊಕದ್ದಮೆಯನ್ನು ತಾನೇ ವಾದಿಸಿದನು ಎಂದು ಗೋಡ್ಸೆಯ ಹೇಳಿಕೆಯನ್ನು ಕೇಳಿದ ಪಂಜಾಬ್ ಹೈಕೋರ್ಟಿನ ನ್ಯಾಯಮೂರ್ತಿ ಅಚ್ರೂರಾಮ್ ಹೇಳಿದ್ದಾರೆ. ವಸ್ತು ಸಂಗತಿಗಳ ಮೇಲೆ ಗೋಡ್ಸೆಗಿದ್ದ ಸ್ವಾಮ್ಯಕ್ಕಾಗಿ ಅವರು ಮೆಚ್ಚುಗೆ ಸೂಚಿಸಿದ್ದಾರೆ. ಪೂನಾದಿಂದ ಹೊರಟಾಗ ಗೀತೆಯ ಒಂದು ಪ್ರತಿಯನ್ನೂ ಅವಿಭಾಜ್ಯ ಭಾರತದ ಒಂದು ನಕಾಶೆಯನ್ನೂ ಆರೆಸೆಸಿನ ಕೇಸರಿ ಬಣ್ಣದ ಒಂದು ಧ್ವಜವನ್ನೂ ತಮ್ಮ ಜೊತೆಯಲ್ಲಿ ಆಪ್ಟೆ ಮತ್ತು ಗೋಡ್ಸೆ ಕೊಂಡೊಯ್ದರು. ಬ್ರಾಹ್ಮಣ ಧರ್ಮದ ಬಗ್ಗೆ ಅವರಿಗಿದ್ದ ಭಕ್ತಿಯನ್ನು ನೋಡಿ ! ಅವರಿಗೆ ದೇಶಕ್ಕಿಂತ ಬ್ರಾಹ್ಮಣ ಧರ್ಮವೇ ಮುಖ್ಯ. ನಾತುರಾಮ್ ಕೂಡಲೇ ಸತ್ತನು. ಆದರೆ ಆಪ್ಟೆ ಸಾಯಲು ಒಂದೆರಡು ಕ್ಷಣಗಳು ಬೇಕಾದವು. ಅವರು ನೇಣುಗಂಬಕ್ಕೆ

ಹೋಗುವುದಕ್ಕೆ ಮುನ್ನ ಆರೆಸೆಸ್‌ನ ಘೋಷಣೆಗಳನ್ನು ಕೂಗಿದರು. ಬ್ರಾಹ್ಮಣ ಧರ್ಮವನ್ನು ಉಳಿಸಲು ಅವರು ತಮ್ಮ ಪ್ರಾಣತ್ಯಾಗ ಮಾಡಲು ಹಿಂದ ಮುಂದು ನೋಡಲಿಲ್ಲ. ಇದು ನಿಜವಾಗಿಯೂ ಫ್ಯಾಸಿಸ್ಟ್ ಧೋರಣೆ.

ಸಾರ್ವಜನಿಕರನ್ನು ಗಾಂಧೀಜಿ ಮೋಸಗೊಳಿಸುತ್ತಿದ್ದರೆಂದು ಈ ಪುಸ್ತಕದ ಮುನ್ನುಡಿ ತಿಳಿಸುತ್ತದೆ. ಹೌದು! ಈ ಆರೋಪವನ್ನು ನಾವು ಒಪ್ಪುತ್ತೇವೆ 'ಗಾಂಧೀಜಿಗೆ ಗೌರವ ಸೂಚಿಸಲು ರಾಜಘಾಟಿಗೆ ಜನರು ಹೋಗಿ ಸತ್ಯ ಮತ್ತು ಅಹಿಂಸೆಯಲ್ಲಿ ತಮಗೆ ನಂಬಿಕೆ ಇದೆ ಎಂದು ಪ್ರತಿಜ್ಞೆ ಮಾಡುವುದನ್ನು ನೋಡಿ ದರೆ ಜನಸಾಮಾನ್ಯರನ್ನು ಮೋಸಗೊಳಿಸಲು ಶಾಶ್ವತ ಸ್ಥಳವಿದೆ.'' ಹೌದು. ದಲಿತರನ್ನು ಇತರೆ ಕ್ರಾಂತಿಕಾರಿ ಬಣಗಳನ್ನು ಗಾಂಧಿ ಮೋಸಗೊಳಿಸಿದರು. ಇದ ರಿಂದಾಗಿ ಭಾರತದ ಕ್ರಾಂತಿ 50 ವರ್ಷ ತಡವಾಗಿದೆ. ಗಾಂಧಿಗೆ ಪ್ರಣಾಮಗಳು.

ಆದರೆ ಗಾಂಧಿಯ ಬಗ್ಗೆಗಿನ ತನ್ನ ನಿಲುವನ್ನು ಆರೆಸೆಸ್ ಏಕೆ ಬದಲಾಯಿಸಿತು? ಗೋಲ್ವಾಲ್ಕರ್ ಪ್ರಭುತ್ವದ ಅವಧಿಯಲ್ಲಿ ಅಷ್ಟೊಂದು ಪ್ರಾಮಾಣಿಕ ರಾಗಿದ್ದ ಆರೆಸೆಸ್ ನಾಯಕರು ಈಗ ಸುಳ್ಳು ಹೇಳಲು ಶುರುಮಾಡಿದ್ದಾರೆ. ಈಗ ಯಾರಾದರೂ ಗಾಂಧೀಜಿಯನ್ನು ಟೀಕಿಸಿದರೆ ಆರೆಸೆಸ್ ಅಂತಹವರ ಮೇಲೆ ಹುಚ್ಚುನಾಯಿಯಂತೆ ಎಗರಿ ಬೀಳುತ್ತದೆ. ಗಾಂಧಿಯನ್ನು ಹೊಗಳುವ ಆರೆಸೆಸ್ ನಾಯಕರ ಪ್ರಶಂಸೆಯನ್ನು ಏನೆಂದು ಹೇಳೋಣ? ಗಾಂಧಿಯ ಅಹಿಂಸಾವಾದವನ್ನು ಆರೆಸೆಸ್ ನಾಯಕರು ವಿರೋಧಿಸಿದರು ಹಾಗೂ ಅವರ ವಿರುದ್ಧ ಹೋರಾಡಿದರು. ಗಾಂಧಿಯ ಅಹಿಂಸಾವಾದವು ಹಿಂದೂಗಳನ್ನು ಹೇಡಿಗಳನ್ನಾಗಿ ಮಾಡಿದೆ ಎಂದು ತಿಲಕ್, ಸಾವರ್ಕರ್ ಮತ್ತು ಗೋಡ್ಸೆ ಹೇಳಿ ದರು ಹಾಗೂ ಹಿಂಸೆಯೇ ಹಿಂದೂ ಧರ್ಮದ ತತ್ವವೆಂದು ಅದನ್ನು ಶಿಫಾರಸು ಮಾಡಿದರು. ಹಿಂದೂಧರ್ಮದ ಈ ವ್ಯಾಖ್ಯಾನಕಾರರ ಪ್ರಕಾರ ಅವರ ಧರ್ಮ ಎಂದೂ ಹಿಂಸೆಯನ್ನು ತಿರಸ್ಕರಿಸಿಲ್ಲ. ಪ್ರತಿಯೊಬ್ಬ ಹಿಂದೂ ದೇವರು ಹಿಂಸೆ ಯನ್ನು ಆಚರಿಸಿದ್ದಾನೆ. ನಾನಾ ಬಗೆಯ ಆಯುಧಗಳನ್ನು ಹಿಡಿದು ನಿಂತಿರುವ ದೇವರ ಚಿತ್ರಪಟಗಳನ್ನಾಗಲೀ, ಪ್ರತಿಮೆಗಳನ್ನಾಗಲೀ ನೋಡಿ! ಆದ್ದರಿಂದ ಗೋಡ್ಸೆವಾದ ಸರಿ, ಗಾಂಧಿವಾದ ತಪ್ಪು.

ನಿಜವಾದ ಹಿಂದೂ ತತ್ವದ ರೀತಿಯಲ್ಲಿ ಆರೆಸೆಸ್ ಹಿಂಸೆಯನ್ನು ಸದಾ ಆಚರಿಸುತ್ತಿದೆ; ಎತ್ತಿ ಹಿಡಿಯುತ್ತಿದೆ. 1983ನೇ ಇಸವಿಯ ಕೊನೆಯ ಭಾಗ

ದಲ್ಲಿ ಸಾವಿರಾರು ಮುಸ್ಲಿಮರು ಹತ್ಯೆಯಾದುದಕ್ಕೆ ಅನೇಕ ಹಿಂದೂಗಳೇ ಆರೆಸೆಸನ್ನು ನಿಂದಿಸಿದರು. ಇಂಡಿಯಾದ ಬೇರೆ ಬೇರೆ ಭಾಗಗಳಲ್ಲಿ ಆರೆಸೆಸ್ ಮೆರವಣಿಗೆಗಳಲ್ಲಿ ಲಾಠಿಗಳನ್ನು, ಖಡ್ಗಗಳನ್ನು, ಚಾಕುಗಳನ್ನು ಪ್ರದರ್ಶಿಸುತ್ತಾರೆ. ಆರೆಸೆಸ್ ಹಿಂಸೆಯಲ್ಲಿ ಮಗ್ನವಾಗಿದೆ; ಇದನ್ನು ಪ್ರತಿದಿನ ಅದು ಮುಸ್ಲಿಮರ ವಿರುದ್ಧ, ಕ್ರಿಶ್ಚಿಯನ್ನರ ವಿರುದ್ಧ, ಸಿಖ್ಖರ ವಿರುದ್ಧ, ದಲಿತರ ವಿರುದ್ಧ ಕೋಮುಗಲಭೆಗಳನ್ನು ಹುಟ್ಟು ಹಾಕುವುದರಲ್ಲಿ ನೋಡಬಹುದು. ಆರೆಸೆಸ್ ಕಛೇರಿಗಳಲ್ಲಿ ಶಸ್ತ್ರಾಸ್ತ್ರಗಳು ತುಂಬಿವೆ. ಆದ್ದರಿಂದ ಆರೆಸೆಸ್ ಮತ್ತು ಹಿಂದೂ ತತ್ವಜ್ಞಾನ ಹಿಂಸೆಯಲ್ಲಿ ನಿರತವಾಗಿವೆ ಎಂದು ಗೋಡ್ಸೆ ಧೈರ್ಯವಾಗಿ ಒಪ್ಪಿಕೊಂಡ ಸತ್ಯಕ್ಕಾಗಿ ಅವನಿಗೆ ನಿಜವಾಗಿಯೂ ಅಭಿನಂದನೆ ಸಲ್ಲಬೇಕಾಗಿದೆ. ಹಿಂದೂ "ಅಹಿಂಸಾವಾದ" ಮತ್ತು "ಸಹಿಷ್ಣುತೆ" ಬಗ್ಗೆ ಅತಿ ಪ್ರಚಾರದಿಂದ ಮೋಸಹೋಗಿರುವ ವಿದೇಶೀಯರು ಇದನ್ನು ತಿಳಿಯಬೇಕಾಗಿದೆ. ಆ ಪುಸ್ತಕದ ಮೊದಲನೆಯ ಭಾಗದಲ್ಲಿ, ತನ್ನ ಮೇಲಿನ ಆಪಾದನೆಗೆ ಉತ್ತರಿಸುತ್ತಾ ತಾನು ಹಿಂಸೆಯನ್ನು ಆಚರಿಸುವುದಾಗಿಯೂ ಒಂದು ಪಿಸ್ತೂಲನ್ನು ಹೊಂದಿರುವುದಾಗಿಯೂ ಗಾಂಧಿ ತತ್ವವನ್ನು ವಿರೋಧಿಸುವ ವಿಚಾರಧಾರೆಯಾದ ಆರೆಸೆಸನ್ನು ಪ್ರತಿನಿಧಿಸುವುದಾಗಿಯೂ ಗೋಡ್ಸೆ ಮುಚ್ಚುಮರೆಯಿಲ್ಲದೆ ಒಪ್ಪಿಕೊಂಡಿದ್ದಾನೆ. "ಗಾಂಧಿ ಪ್ರತಿನಿಧಿಸುವ ಅಹಿಂಸಾವಾದದ ತತ್ವಗಳಿಂದ ಹಿಂದೂಜನಾಂಗ ಅಂತಿಮವಾಗಿ ನಪುಂಸಕವಾಗುತ್ತದೆ. ತತ್ಪರಿಣಾಮವಾಗಿ ವಿದೇಶೀ ಆಕ್ರಮಣ ಅಥವಾ ಇತರೆ ಜನಾಂಗಗಳು, ವಿಶೇಷವಾಗಿ ಮುಸ್ಲಿಮರು ಒಳಸೇರುವುದನ್ನು ತಡೆಗಟ್ಟಲು ಅಸಮರ್ಥರಾಗುತ್ತಾರೆಂಬುದು ನನ್ನ ನಂಬಿಕೆ" (ಪುಟ,7) ಹಿಂದೂಗಳು ಅಥವಾ ಹಿಂದೂಧರ್ಮ ಹಿಂಸಾಚಾರಕ್ಕಾಗಿ ನಿಂತಿದ್ದಾರೆಂದು ಈ ವಾಕ್ಯ ಪ್ರಾಮಾಣಿಕವಾಗಿ ಹೇಳುತ್ತದೆ. ಗೀತೆಯಲ್ಲಿ ಕೃಷ್ಣಪರಮಾತ್ಮ ಕೂಡ ಹಿಂಸೆಯನ್ನು ಬೋಧಿಸುತ್ತಾನೆ. ಹಾಗಾದರೆ ಕೆಲವು ಜನರು ಹಿಂದೂಧರ್ಮ ಅಹಿಂಸೆಯನ್ನು ಪ್ರತಿಪಾದಿಸುತ್ತದೆ ಎಂದು ಏಕೆ ತಪ್ಪು ತಿಳಿದಿದ್ದಾರೆ ?

ಆರೆಸೆಸ್ ಮತ್ತು ಗೋಡ್ಸೆ, ಗಾಂಧಿ ಮುಸ್ಲಿಮರ ಪರವೆಂದು ಪರಿಗಣಿಸಿದರು. ಆದರೆ ಗಾಂಧಿ ಮುಸ್ಲಿಮರ ವಿರೋಧಿಯೆಂದೂ ಹಿಂದೂ ನಾಯಕನೆಂದೂ ಮುಸ್ಲಿಮರು ಪರಿಗಣಿಸಿದ್ದರು. ಅದೇ ರೀತಿ ಡಾ॥ ಅಂಬೇಡ್ಕರ್ ಹೇಳುತ್ತಿದ್ದರು. ಅಂಬೇಡ್ಕರ್ ನೇತೃತ್ವದಲ್ಲಿದ್ದ ದಲಿತರು ಗಾಂಧಿ ತಮ್ಮ

ಶತ್ರುವೆಂದು ಪರಿಗಣಿಸಿದ್ದರು. ಇದರ ಅರ್ಥ ಹಿಂದೂ ನಾಜಿಗಳು, ಶಂಕರಾ ಚಾರಿಗಳು, ಸನಾತನಿಗಳು ಮತ್ತು ದಲಿತರು, ಕ್ರಿಶ್ಚಿಯನ್ ಮುಂತಾದವರೆಲ್ಲಾ ಗಾಂಧಿ ತಮ್ಮ ಹಿತಾಸಕ್ತಿಗಳಿಗೆ ವೈರಿಯೆಂದು ತಿಳಿದಿದ್ದರು. ಹಿಂದೂಗಳಲ್ಲ ದವರು ಗಾಂಧಿ ತಮ್ಮ ವಿರೋಧಿ ಎಂದು ಘೋಷಿಸಿದ್ದನ್ನು ನಾವು ಅರ್ಥಮಾಡಿ ಕೊಳ್ಳಬಹುದು. ಆದರೆ ಹಿಂದೂ ಧರ್ಮದ ವಾರಸುದಾರರೇ ಗಾಂಧಿ ತಮ್ಮ ಶತ್ರುವೆಂದು ಘೋಷಿಸಿದ್ದು ಎಂಥಾ ಶೋಚನೀಯ ಸಂಗತಿ! ಹಿಂದೂ ಧರ್ಮಕ್ಕೆ ಅವರು ಅಷ್ಟೊಂದು ಸೇವೆ ಸಲ್ಲಿಸಿದರೂ ಅದನ್ನು ಗುರುತಿಸಲು ಹಾರುವರು ನಿರಾಕರಿಸಿದರು. ಬ್ರಾಹ್ಮಣನಾಗಿದ್ದರೆ ಮಾತ್ರ ನಾಯಕನೆಂದು ಬ್ರಾಹ್ಮಣರು ಒಪ್ಪಿಕೊಳ್ಳುತ್ತಾರೆಂದು ಇದರಿಂದ ಸ್ಪಷ್ಟವಾಗುವುದಿಲ್ಲವೆ?

ಬಿರ್ಲಾ ಮಂದಿರದಲ್ಲಿ ಗಾಂಧಿಯನ್ನು ಕೊಲ್ಲಲು ತಾನು ಮಾಡಿದ ಮೊದಲ ಪ್ರಯತ್ನ (ಜನವರಿ 20) ವಿಫಲವಾದ ಮೇಲೆ ದೆಹಲಿಯ ನಿರಾಶ್ರಿತ ಶಿಬಿರ ಗಳಲ್ಲಿ ಅಡ್ಡಾಡುತ್ತಿದ್ದ ಒಬ್ಬ ನಿರಾಶ್ರಿತನಿಂದ ಪಿಸ್ತೂಲನ್ನು ಪಡೆದೆನೆಂದು ಗೋಡ್ಸೆ ಹೇಳುತ್ತಾನೆ. ಸಾವರ್ಕರ್ ಜತೆಗಿನ ತನ್ನ ಸಂಬಂಧವನ್ನು ಹೇಳುತ್ತಾ "ಸಾವರ್ಕರ್ ಒಂದು ನಿಷ್ಠಾವಂತ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದವರು" (ಪುಟ 14) ಎಂದು ಗೋಡ್ಸೆ ಹೇಳುತ್ತಾನೆ. ತಾನು ಅನೇಕ ವರ್ಷಗಳ ಕಾಲ ಆರೆಸೆಸ್‌ನಲ್ಲಿ ಇದ್ದೆನೆಂದೂ ಒಪ್ಪಿಕೊಳ್ಳುತ್ತಾನೆ. ಆ ಸಮಯದಲ್ಲಿ ಒಂದು ದಿನ ಪತ್ರಿಕೆಯನ್ನು ಪ್ರಾರಂಭಿಸಲು ಹದಿನೈದು ಸಾವಿರ ರೂಪಾಯಿಗಳನ್ನು ಸಾವರ್ಕರ್ ತನಗೆ ಕೊಟ್ಟರೆಂದು ಹೇಳುತ್ತಾನೆ. ಈಗ ಹದಿನೈದು ಸಾವಿರ ರೂಪಾಯಿಗಳ ಬೆಲೆ ಏನು? ಸಾವರ್ಕರ್ ಎಷ್ಟು ಶ್ರೀಮಂತರಾಗಿದ್ದರು? ಗಾಂಧಿ ಕೊಲೆಗಡುಕರಿಗೆ ಹಣದ ಸಮಸ್ಯೆಯೇ ಇರಲಿಲ್ಲ. ಅವರು ಬಾಂಬೆಯಿಂದ ದೆಹಲಿಗೆ ವಿಮಾನದಲ್ಲಿಯೇ ಪ್ರಯಾಣ ಮಾಡುತ್ತಿದ್ದರು.

ಗಾಂಧಿಗೆ ಪಾಠ ಕಲಿಸುವುದೇ ಗೋಡ್ಸೆಯ ಜೀವನದ ಮುಖ್ಯ ಧ್ಯೇಯ ವಾಗಿತ್ತು. "ತನ್ನ ಗೌರವಕ್ಕೆ ಧಕ್ಕೆ ಬಂದರೆ ಹಿಂದೂ ಕೂಡ ಅಸಹಿಷ್ಣುವಾಗ ಬಲ್ಲ" (ಪುಟ 19) ಎಂಬುದನ್ನು ಪ್ರಪಂಚಕ್ಕೆ ತೋರಿಸುವುದಾಗಿತ್ತು. ಆದರೆ ಹಿಂದೂ ತನ್ನ ಅಸಹಿಷ್ಣುತೆಗೆ ಹೆಸರಾಗಿದ್ದಾನೆ. ನೈಪಾಲ್‌ನಂತಹ ಪ್ರಸಿದ್ಧ ಲೇಖಕ ಭಾರತೀಯನಾಗಿ ಹಿಂದೂ ಆಗಿ ಜನಿಸಿದ್ದರೂ ಅವನ ಕೃತಿಗಳು ಯಾವುದೇ ಭಾರತೀಯ ಭಾಷೆಗೂ ಅನುವಾದಗೊಂಡಿಲ್ಲ. ಏಕೆಂದರೆ ಅವನು

ಹಿಂದೂಗಳನ್ನು ಟೀಕಿಸುತ್ತಾನೆ. ಯಾವುದೇ ಬಗೆಯ ಟೀಕೆಯನ್ನೂ ಬ್ರಾಹ್ಮಣ ಸಹಿಸುವುದಿಲ್ಲ. ಅವನಿಗೆ ಸತ್ಯವನ್ನು ಕಂಡರೆ ಆಗುವುದಿಲ್ಲ. ಆದ್ದರಿಂದ ಗೋಡ್ಸೆ ಹೇಳಿದ್ದು ಸರಿಯಲ್ಲ. ಹಿಂದೂವನ್ನು ಅಸಹಿಷ್ಣುವನ್ನಾಗಿ ಮಾಡಲು ಯಾವುದೇ ಅಗತ್ಯವಿಲ್ಲ. ಹಿಂದೂ ಅಸಹಿಷ್ಣುತೆಯನ್ನು ತಿಳಿಯ ಬಯಸು ವವರು ಫ್ರಾನ್ಸಿಸ ಪಾದ್ರಿ ಏಬಲ್ ದುಬಾಯ್ ಬರೆದಿರುವ "ಹಿಂದೂ ಆಚಾರ ವಿಚಾರಗಳು" (ದಿ ಹಿಂದೂ ಕಸ್ಟಮ್ಸ್ ಅಂಡ್ ಮ್ಯಾನರ್ಸ್) ಎಂಬ ಪುಸ್ತಕ ವನ್ನು ನೋಡಬಹುದು.

ಆರೆಸೆಸ್, ಹಿಂದೂ ಮಹಾಸಭಾ ಮತ್ತು ಅಂಥದೇ ಮನಸ್ಸುಳ್ಳ ಹಿಂದೂಗಳು ಆಗಸ್ಟ 15ನೇ ದಿನವನ್ನು ಸ್ವಾತಂತ್ರ್ಯ ದಿನಾಚರಣೆ ಎಂದು ಗುರುತಿಸಿಯೇ ಇಲ್ಲ. ಆ ದಿನ ರಾಷ್ಟ್ರೀಯ ಧ್ವಜವನ್ನು ಹಾರಿಸದೆ ಸಾವರ್ಕರ್ ಆರೆಸೆಸ್ ಧ್ವಜವನ್ನು ಹಾರಿಸುತ್ತಿದ್ದರೆಂದು ಗೋಡ್ಸೆ ಹೇಳುತ್ತಾನೆ.

ಗಾಂಧಿ ಹಿಂದೂ ವಿರೋಧಿಯೆಂದು ಗೋಡ್ಸೆ ವಾದಿಸುತ್ತಾನೆ. ಆದರೆ ತನ್ನ ವಾದಕ್ಕೆ ಆತ ಯಾವ ಪುರಾವೆಯನ್ನೂ ಒದಗಿಸಿಲ್ಲ. ತನ್ನ ಪಕ್ಷ ಅನು ಸರಿಸುವ ಫ್ಯಾಸಿಸ್ಟ ವಿಧಾನಗಳ ಮಾದರಿಯಲ್ಲಿ ಗಾಂಧಿಯನ್ನು ವಿರೋಧಿಸಲು "ಗುಪ್ತವಾದ ಸರ್ವಾಧಿಕಾರಿ" ಕಾರ್ಯಕ್ರಮಗಳನ್ನು ಸಂಘಟಿಸಲು ತೀರ್ಮಾ ನಿಸುತ್ತಾನೆ. "ಚಿಂತನಗಂಗಾ" ಎಂಬ ಪುಸ್ತಕದಲ್ಲಿ ಗೋಲ್ವಾಲ್ಕರ್ ಭಾರತಕ್ಕೆ. ಪ್ರಜಾಪ್ರಭುತ್ವ ಹೊಂದುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಆರೆಸೆಸ್‌ಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ. ಹಿಂದೂ ಧರ್ಮ ಮತ್ತು ಪ್ರಜಾಪ್ರಭುತ್ವ ಹೊಂದಿಕೊಂಡು ನಡೆಯಲಾರವು.

ತನ್ನ ಚಟುವಟಿಕೆಗಳ ಬಗ್ಗೆ ಸಾವರ್ಕರ್‌ಗೆ ಗೋಡ್ಸೆ ತಿಳಿಸುತ್ತಲೇ ಇದ್ದನು. ಆದರೂ ಗಾಂಧಿಯನ್ನು ಕೊಲ್ಲುವ ತನ್ನ ಉದ್ದೇಶ ಸಾವರ್ಕರ್‌ಗೆ ಗೊತ್ತಿರಲಿಲ್ಲವೆಂದು ಒತ್ತಿ ಹೇಳುತ್ತಾನೆ. ಆದರೆ ಗಾಂಧಿಯನ್ನು ಕೊಲ್ಲುವ ಪಿತೂರಿಯನ್ನು ಜನವರಿ 14, 1948ರಂದು ಬಾಂಬೆಯಲ್ಲಿರುವ ಸಾವರ್ಕರ್ ಮನೆಯಲ್ಲಿ ಯೋಜಿಸಲಾಯಿತೆಂದು ಪೋಲೀಸ್ ದಾಖಲೆಗಳ ಪುರಾವೆ ಇದೆ. (ನೋಡಿ : ಫ್ರೀಡಮ್ ಅಟ್ ಮಿಡ್‌ನೈಟ್, ಪುಟ 383-4)

ಆರೆಸೆಸ್ಸೇತರ ನಾಯಕರಾದ ಕಾಂಗ್ರೆಸ್ಸಿನ ಮೊರಾರ್ಜಿ ದೇಸಾಯಿ ಮತ್ತು ವಲ್ಲಭಾಯಿ ಪಟೇಲರಿಗೆ ಈ ವಿಷಯ ಗೊತ್ತಿರುವಾಗ ಆರೆಸೆಸ್‌ನ ವ್ಯಕ್ತಿಗೆ

ಗೊತ್ತಿಲ್ಲ ಎನ್ನುವುದು ಹೇಗೆ? ಬಹುಶಃ ಸಾವರ್ಕರರನ್ನು ನೇಣುಗಂಬದಿಂದ ಉಳಿಸುವ ಉದ್ದೇಶದಿಂದ ಗೋಡ್ಸೆ ಈ ನಿಲುವನ್ನು ತಾಳಿರಬೇಕು. ಸರ್ಕಾರ ದಲ್ಲಿದ್ದ ಬ್ರಾಹ್ಮಣ ನಾಯಕರು ಮತ್ತು ಪೊಲೀಸ್ ಕೂಡ ಸಾವರ್ಕರರನ್ನು ರಕ್ಷಿಸಲು ತಮ್ಮೆಲ್ಲ ಪ್ರಯತ್ನ ಮಾಡಿದರು. ಗಾಂಧಿ ಕೊಲೆಯ ತನಿಖೆಯನ್ನೇ ನಿಲ್ಲಿಸಲಾಯಿತು. ಪೊಲೀಸರು ತಮ್ಮ ಅಸಹಕಾರವನ್ನು ತೋರಿಸಿದರು. ಆರೆಸೆಸ್ ತನ್ನ ಜವಾಬ್ದಾರಿ ತಪ್ಪಿಸಿಕೊಳ್ಳಲು ಶತಪ್ರಯತ್ನ ಮಾಡಿತು. ನ್ಯಾಯ ಮೂರ್ತಿಗಳು ಬೆಂಬಲಿಸಿದರು.

ಹಿಂಸೆಯ ವಿಚಾರವಾಗಿ ಮತ್ತೆ ಹೇಳುವುದಾದರೆ, ಗೋಡ್ಸೆ ಅದರ ಪರ ವಾಗಿ ಉತ್ತಮ ವಾದವನ್ನು ಹೂಡುತ್ತಾನೆ. ತನ್ನ ವಾದವನ್ನು ಸಾಧಿಸಲು ಹಿಂದೂ ಧರ್ಮಗ್ರಂಥಗಳಿಂದಲೂ ಹಾಗೂ ಹಿಂದೂ ದೇವಾನುದೇವತೆಗಳು ಎಸಗಿದ ಹಿಂಸಾಚಾರದ ವಿವಿಧ ಕಾರ್ಯಗಳನ್ನೂ ಉಲ್ಲೇಖಿಸುತ್ತಾನೆ. ಶಿವಾಜಿ, ರಾಣಾಪ್ರತಾಪಸಿಂಗ್, ಗುರು ಗೋವಿಂದ ಸಿಂಗ್ ಇವರನ್ನು ತಲೆಕೆಟ್ಟ ದೇಶ ಭಕ್ತರೆಂದು ಟೀಕಿಸಿದ ಗಾಂಧಿ ಗೋಡ್ಸೆಯ ಪ್ರಕಾರ ಒಬ್ಬ ಮೋಸಗಾರ. (ಸಿಖ್ಖರ ನಾಯಕ ಸಂತ ಭಿಂದ್ರನ್‌ವಾಲಾ, ಗುರುಗೋವಿಂದ್ ಸಿಂಗನನ್ನು ಟೀಕಿಸಿದ ಗಾಂಧಿಯನ್ನು ಖಂಡಿಸಿದ್ದಾನೆ. ಇದನ್ನು ಸಂಡೆ ಪಾಕ್ಷಿಕದ (ಮೇ 15, 1983) ಸಂದರ್ಶನದಲ್ಲಿ ನೋಡಬಹುದು. ಆದ್ದರಿಂದ ಗಾಂಧಿಯನ್ನು ರಾಷ್ಟ್ರಪಿತನೆಂದು ಸಿಖ್ಖರು ಗುರುತಿಸುವುದಿಲ್ಲ ಎಂದಿದ್ದಾರೆ.)

ಸಾಮಾಜಿಕವ್ಯವಸ್ಥೆಯನ್ನು ಬದಲಿಸುವಂತಹ ವಿಷಯಗಳ ಬಗ್ಗೆ ಹಿಂದೂ ಧರ್ಮ ಬಹಳ ಅಸಹಿಷ್ಣುವಾಗಿದೆ. ಬ್ರಾಹ್ಮಣರ ಮುಂದೆ ತಲೆಬಾಗಿ ನಮಸ್ಕರಿ ಸುವವರನ್ನು ಮಾತ್ರ ಅದು ಸಹಿಸುತ್ತದೆ. ದೇವರ ಹೆಸರಿನಲ್ಲಿ ಪ್ರತಿಭಟನಕಾರ ರನ್ನು ಅದು ಧ್ವಂಸಮಾಡುತ್ತದೆ. ಗೀತೆಯನ್ನು ನೋಡಿ! ಜಡವಾದಿಗಳ ವಿರುದ್ಧ ಅದು ದ್ವೇಷವನ್ನು ಬೋಧಿಸುತ್ತದೆ. ಅವರನ್ನು ರಾಕ್ಷಸರೆಂದು ಕರೆ ಯುತ್ತದೆ. (ಅರುಣ್‌ಶೌರಿ : ಹಿಂದೂಧರ್ಮ, ಪುಟ-362)

## ಸಮಾಜವಾದಿ ಬ್ರಾಹ್ಮಣರು ಮತ್ತು ಆರೆಸೆಸ್ ಬ್ರಾಹ್ಮಣರು

ಈಗ ಬ್ರಾಹ್ಮಣರ ಎರಡು ಬಣಗಳ ನಡುವೆ ಹೋರಾಟ ನಡೆಯುತ್ತಿದೆ. ಒಂದು, ಆರೆಸೆಸ್ ನೇತೃತ್ವದ ಪ್ರತಿಗಾಮಿ ಬ್ರಾಹ್ಮಣರು; ಎರಡು, ಇಂದಿರಾ ಗಾಂಧಿ ನೇತೃತ್ವದ ಪ್ರಗತಿಪರ ಅಥಾವ ಸಮಾಜವಾದಿ ಬ್ರಾಹ್ಮಣರು ಹಾಗೂ

ಇ. ಎಂ. ಎಸ್. ನಂಬೂದರಿಪಾಡ್‌ರಂತಹ ಮಾರ್ಕ್ಸಿಸ್ಟರು. ಈ ಎರಡು ಬಣಗಳ ನಡುವಣ ಹೋರಾಟವನ್ನು ಪ್ರತಿಗಾಮಿಗಳಿಗೂ ಪ್ರಗತಿಪರರಿಗೂ ನಡೆಯುವ ಹೋರಾಟವೆಂದು ಬಣ್ಣ ಕೊಡಲಾಗಿದೆ. ವಿವಿಧ ಕಮ್ಯೂನಿಸ್ಟ್ ಪಕ್ಷಗಳು ಮತ್ತು ಇತರೆ ಬಣಗಳು ಮುಗ್ಧ ಜನಸಮೂಹವನ್ನು ವಂಚಿಸಲು ರಚಿತವಾಗಿವೆ. ಶೂದ್ರರನ್ನೂ ದಲಿತರನ್ನೂ ಅವರವರ ಸ್ಥಾನದಲ್ಲೇ ಇಡಲು ಬ್ರಾಹ್ಮಣರ ಈ ಎರಡು ಬಣಗಳು ಒಗ್ಗಟ್ಟಾಗಿವೆ. ಈಗಿರುವಂತೆ ಸಾಮಾಜಿಕ ವ್ಯವಸ್ಥೆಯನ್ನು ಮುಂದುವರಿಸಲು ಅವು ಒಂದೇ ರೀತಿಯಲ್ಲಿ ಯೋಚಿಸುತ್ತಿವೆ. ಬ್ರಾಹ್ಮಣರು ಮಾತ್ರ ಈ ದೇಶವನ್ನು ಆಳಬೇಕೆಂಬ ವಿಷಯದಲ್ಲಿ ಈ ಎರಡೂ ಪಕ್ಷಗಳು ಒಂದಾಗಿವೆ. ಅವರು ಹಾಗೆ ಹೇಳದಿದ್ದರೂ ಅವರ ಚಟುವಟಿಕೆಗಳು ಇದನ್ನು ಸಾಬೀತು ಪಡಿಸುತ್ತವೆ. ಈ ವಿವರಣೆಯನ್ನು ಗೋಡ್ಸೆವಾದ (ಪುಟ, 30) ದೃಢಪಡಿಸುತ್ತದೆ. "ತನ್ನ ಸ್ವಾರ್ಥ ಉದ್ದೇಶಗಳಿಗಾಗಿ.... ಬ್ರಿಟಿಷರ ಆಶ್ರಯದಿಂದ ಅಧಿಕಾರಗಳಿಸಿದ ಬಣವು.... ಈಗ ಗಾಂಧಿಯ ಮರಣದ ಲಾಭ ಪಡೆಯಲು ಯತ್ನಿಸುತ್ತಿದೆ. ಆದರೆ ಅವರಿಗೆ ಸೂಕ್ತ ಸ್ಥಾನವನ್ನು ಇತಿಹಾಸ ನಿರ್ಧರಿಸುತ್ತದೆ."

ಈ 'ಬಳಗ' (ಬಣ) ಎಂಬ ಮಾತಿನಲ್ಲಿ ಶ್ರೀಮತಿ ಗಾಂಧಿಯ ತಂದೆಯಾದ ಕಾಶ್ಮೀರೀ ಬ್ರಾಹ್ಮಣ ಜವಾಹರಲಾಲನೆಹರೂವನ್ನು ಗೋಡ್ಸೆ ಸೂಚಿಸುತ್ತಿದ್ದಾನೆ. ತನ್ನ ಬ್ರಾಹ್ಮಣ್ಯಕ್ಕೆ ನೆಹರೂ ಅಷ್ಟೇ ಪ್ರಸಿದ್ಧನಾಗಿದ್ದನು. ಭಾರತವನ್ನು ಬ್ರಾಹ್ಮಣರ ಆಳ್ವಿಕೆಯಲ್ಲಿ ಇಡಬೇಕೆಂಬ ವಿಷಯದಲ್ಲಿ ಆತ ಆರೆಸೆಸ್ ಜೊತೆ ಯಾವುದೇ ಭಿನ್ನಾಭಿಪ್ರಾಯ ಹೊಂದಿರಲಿಲ್ಲ. ಒಂದು ಕಡೆ, ನೆಹರೂ–ಇಂದಿರಾಗಾಂಧಿ, ಇನ್ನೊಂದು ಕಡೆ ಆರೆಸ್ಸೆಸ್–ಇವರ ನಡುವಣ ಭಿನ್ನಭಿಪ್ರಾಯ ತಾತ್ವಿಕವಾದದ್ದಲ್ಲ; ಅದು ವೈಯಕ್ತಿಕ. ಈ ಎರಡು ಗುಂಪುಗಳೂ ಹೊರಗೆ ಕಟುವಾಗಿ ಜಗಳವಾಡಬಹುದು. ಇದು ನಮ್ಮನ್ನು ವಂಚಿಸುವ ತಂತ್ರ ಅಷ್ಟೆ. ಆದರೆ ಎರಡು ಬಣಗಳೂ ಭಾರತವನ್ನು ಬ್ರಾಹ್ಮಣರ ಆಧಿಪತ್ಯದಲ್ಲಿ ಇಡಬೇಕೆಂಬ ವಿಚಾರದಲ್ಲಿ ಒಗ್ಗಟ್ಟಾಗಿವೆ.

ನೆಹರೂ ನೇತೃತ್ವದ ಸಮಾಜವಾದಿ ಬ್ರಾಹ್ಮಣರು ಭಾರತವನ್ನು ಇಬ್ಭಾಗ ಮಾಡುವುದರಲ್ಲಿ ಆಸಕ್ತರಾಗಿದ್ದರು. ಏಕೆಂದರೆ ಉತ್ತರ ಭಾರತದ ಮುಸ್ಲಿಮರನ್ನು ಒಂದು ಪ್ರತ್ಯೇಕ ದೇಶಕ್ಕೆ ಕಳಿಸಬಹುದು. ಆದರಿಂದ ದಲಿತರು

ಮತ್ತು ಹಿಂದುಳಿದ ವರ್ಗವನ್ನು ಆಳುವುದು ಸುಲಭವಾಗುತ್ತದೆಂದು ಭಾವಿಸಿದರು. ನೆಹರು ಮತ್ತು ಸಮಾಜವಾದಿ ಬ್ರಾಹ್ಮಣರು ಮಾಡಿದ್ದು ಸರಿಯೆಂದೂ ಆರೆಸೆಸ್ ಬ್ರಾಹ್ಮಣರು ಮಾಡಿದ್ದು ತಪ್ಪೆಂದೂ ತದನಂತರದ ಘಟನೆಗಳು ತೋರಿಸಿವೆ. ಬ್ರಿಟಿಷ್ ಆಳ್ವಿಕೆಯ ಸ್ಥಾನದಲ್ಲಿ ಇನ್ನೂ ಹೆಚ್ಚು ದಬ್ಬಾಳಿಕೆ ನಡೆಸುವ ಬ್ರಾಹ್ಮಣ ಆಳ್ವಿಕೆ ಬಂದು ದಲಿತರು ಮತ್ತು ಹಿಂದುಳಿದ ವರ್ಗಗಳ ದಮನವನ್ನು ಗಣನೀಯವಾಗಿ ಹೆಚ್ಚಿಸಿತು. ಬ್ರಾಹ್ಮಣ ಸಾಮ್ರಾಜ್ಯಶಾಹಿ ತಲೆತಿರುಗಿಸುವಂತಹ ತನ್ನ ಶಿಖರ ಮುಟ್ಟಿದೆ. [ವಿವರಗಳಿಗೆ: ಸ್ವಾಮಿ ಧರ್ಮತೀರ್ಥ ಅವರ ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ (ಹಿಸ್ಟರಿ ಆಫ್ ಹಿಂದೂ ಇಂಪೀರಿಯಲಿಸಂ) ನೋಡಿ]

ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನು ಓಡಿಸಲು 'ಹಿಂದೂಗಳಿಗೆ ಮಿಲಿಟರಿ ಶಿಕ್ಷಣ' ಕೊಡಬೇಕೆಂದು ಹೇಳುವ ಆರೆಸೆಸ್ ನಿರ್ಣಯವನ್ನು ಗೋಡ್ಸೆ ಉಲ್ಲೇಖಿಸುತ್ತಾನೆ. ಇಲ್ಲಿ ನಮಗೆ ಅನುಮಾನ ಬರುತ್ತದೆ. ಹೇಗೆ ಹಿಂದೂಗಳನ್ನು ಸೈನಿಕರನ್ನಾಗಿ ಮಾಡುವುದು ? ಮೊದಲನೆಯದಾಗಿ ಹಿಂದೂಗಳು ಸೈನಿಕ ಜನಾಂಗಕ್ಕೆ ಸೇರಿದವರಲ್ಲ. ಚೀಣಾದ ವಿರುದ್ಧ ನಡೆದ ಯುದ್ಧದಲ್ಲಿ ಅವರು ಸೋತ ಸಂಗತಿ ನೆನಪಿನಲ್ಲಿ ಇನ್ನೂ ಹಸುರಾಗಿದೆ. ಎರಡನೆಯದಾಗಿ ಜಾತಿ ವ್ಯವಸ್ಥೆಯಿಂದ ಒಡೆದುಹೋಗಿರುವ ಹಿಂದೂಗಳು ಒಗ್ಗಟ್ಟಾಗುವುದಿಲ್ಲ. ನಿಜವಾಗಿಯೂ ಸೈನಿಕ ಮನೋಭಾವವಿರುವ ದಲಿತರು ಮತ್ತು ಗಿರಿಜನರನ್ನು ಸೈನ್ಯದಿಂದ ಹೊರಗಿಡಲಾಗಿದೆ. ಅವರನ್ನು ಆಯುಧರಹಿತರನ್ನಾಗಿ ಮಾಡಿದೆ. ಸೈನಿಕ ಪ್ರವೃತ್ತಿ ಇರುವ ಸಿಖ್ಖರು ಹಿಂದೂ ವಿರೋಧಿಗಳಾಗಿದ್ದಾರೆ. ಹಾಗಾದರೆ ಹಿಂದೂಗಳನ್ನು ಹೇಗೆ ಸೈನಿಕ ಪ್ರವೃತ್ತಿಯುಳ್ಳವರನ್ನಾಗಿ ಮಾಡುವುದು ? ಸೈನಿಕ ಪ್ರವೃತ್ತಿ ಇದೆಯೆಂದು ಹೇಳಲಾದ ಆರೆಸೆಸ್ ತುರ್ತುಪರಿಸ್ಥಿತಿಯಲ್ಲಿ ತುಂಬಾ ಗೇಲಿಗೆ ಒಳಗಾಯಿತು. ಆರೆಸೆಸ್ ಮುಖಂಡರಾದ ಬಾಳಾಸಾಹೇಬ ದೇವರಸ ಮತ್ತು ನೂರಾರು ಹುಡುಗರು ಸರ್ಕಾರಕ್ಕೆ ಕ್ಷಮಾಯಾಚನೆ ಪತ್ರವನ್ನು ಸಲ್ಲಿಸಿದರು. ಹಾಗೂ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿದರೆ ಇಂದಿರಾ ಗಾಂಧಿಯವರಿಗೆ ಸಾಷ್ಟಾಂಗ ನಮಸ್ಕಾರ ಹಾಕುತ್ತೇವೆಂದರು. ಇಂಥಾ ಹೇಡಿಗಳಿರುವ ರಾಷ್ಟ್ರ ಹೇಗೆ ತಾನೆ ಸೈನಿಕ ಪ್ರವೃತ್ತಿಯನ್ನು ಪಡೆದೀತು ?

ಗಾಂಧಿಯ ಒಡೆದಾಳುವ ನೀತಿಯನ್ನು ಗೋಡ್ಸೆ ಆಕ್ಷೇಪಿಸುತ್ತಾನೆ. ಆದರೆ

ವಿಭಾಗವಾಗಲು ಮನಸ್ಸಿಲ್ಲದ ಜನರನ್ನು ಯಾರುತಾನೆ ಒಡೆಯಲು ಸಾಧ್ಯ ? ಹಿಂದೂ ಜಾತಿಪದ್ಧತಿ ಹಿಂದೂಗಳನ್ನು ಒಡೆದು ಹಾಕಿದೆ. ಆದ್ದರಿಂದಲೇ ಅವರು ಒಡೆದು ಕೊಂಡೇ ಇರಲು ಇಚ್ಛಿಸುತ್ತಾರೆ. ಭಾರತದಲ್ಲಿ ಹಿಂದೂಗಳು ಅಲ್ಪ ಸಂಖ್ಯಾತರಾಗಬಹುದೆಂಬ ಭೀತಿಯನ್ನು ಆರೆಸೆಸ್ ನಾಯಕರು ಆಗೀದಾಗ್ಗ ಹೇಳುತ್ತಿರುತ್ತಾರೆ. ಅವರ ಭಯ ಪ್ರಮಾಣಿಕವಾದದ್ದು. ದೇಶದ ಶೇ. ೧೦ ರಷ್ಟಿರುವ ಆರ್ಯ ದಾಳಿಕಾರರ ದಬ್ಬಾಳಿಕೆಯನ್ನು ದಲಿತರು ಮತ್ತು ದ್ರಾವಿಡರು ಕಿತ್ತೊಗೆದರೆ 'ಹಿಂದೂಗಳು' ಅಲ್ಪಸಂಖ್ಯಾತರಾಗುತ್ತಾರೆ. ಇದು ಆದಷ್ಟು ಬೇಗ ಆಗಿಯೇ ಅಗುತ್ತದೆ. ಈಗಾಗಲೇ ದಲಿತರು ತಾವು ಹಿಂದೂಗಳಲ್ಲವೆಂದು ಘೋಷಿಸಿದ್ದಾರೆ. ಹಾಗೆಯೇ ಸಿಖ್ಖರು ಘೋಷಿಸಿದ್ದಾರೆ. ಇನ್ನೂ ಅನೇಕ ಮಂದಿ ಹಾಗೆ ಹೇಳುತ್ತಾರೆ. ಆಗ ಹಿಂದೂಗಳು ಅಲ್ಪಸಂಖ್ಯಾತರಾಗುತ್ತಾರೆ.

ಭಾರತವನ್ನು ವಿಭಜಿಸಲು ಗಾಂಧಿಯೇ ಕಾರಣವೆಂದೂ "ಗಾಂಧಿಯ ಅಸ್ತಿತ್ವವನ್ನು ಕೂಡಲೇ ಕೊನೆಗಾಣಿಸಬೇಕು" (ಪುಟ, 40) ಎಂದೂ ಗೋಡ್ಸೆ ಹೇಳುತ್ತಾನೆ. "ತಪ್ಪಿನ ಮೇಲೆ ತಪ್ಪು, ಸೋಲಿನ ಮೇಲೆ ಸೋಲು, ದುರಂತದ ಮೇಲೆ ದುರಂತ ತರುವಲ್ಲಿ ಗಾಂಧಿ ಅಪರಾಧಿ" (ಪುಟ, 41) ಎಂಬ ಅಭಿಪ್ರಾಯ ವನ್ನು ನಾವು ಒಪ್ಪುತ್ತೇವೆ. ಗಾಂಧಿ ಇತಿಹಾಸದ ಬಹು ದೊಡ್ಡ ಸೋಲು. ಖಾದಿ ಬಟ್ಟೆ ಮತ್ತು ಗಾಂಧಿ ಟೋಪಿ ಮಾಡುವ ಮೋಸಕ್ಕೆ ಗೌರವವನ್ನು ತಂದು ಕೊಡುವಲ್ಲಿ ಮಾತ್ರ ಗಾಂಧಿ ಯಶಸ್ವಿಯಾಗಿದ್ದಾರೆ.

ಗಾಂಧಿ ಇಲ್ಲದಿದ್ದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮವು ರಾಜಕೀಯ ಸ್ವಾತಂತ್ರ್ಯದ ಹೋರಾಟದ ಜೊತೆಗೆ ಸಾಮಾಜಿಕ, ಆರ್ಥಿಕ ಹೋರಾಟವೂ ಆಗಿ ಜನರು ಕ್ರಾಂತಿಯನ್ನುಂಟುಮಾಡುತ್ತಿದ್ದರೆಂದು ಹೇಳಬಹುದು. ಅಂತಹ ಸಾಮಾಜಿಕ, ಆರ್ಥಿಕ ಸುಧಾರಣೆಗಳನ್ನು ಜನರು ಬಯಸಿದಾಗ ಗಾಂಧಿ ಅಡ್ಡಬರು ತ್ತಿದ್ದರು.

## ಗಾಂಧಿ—ಕ್ರಾಂತಿ ವಿರೋಧಿಯೆ ?

ಗಾಂಧಿ ನಿಜವಾಗಿಯೂ ಒಂದುಸಾಚಾ ಕ್ರಾಂತಿಯ ವಿರೋಧಿಯಾಗಿ ತಮ್ಮ ಪಾತ್ರ ನಿರ್ವಹಿಸಿದರು. ಜಿ. ಡಿ. ಬಿರ್ಲಾರಂಥ ಬಂಡವಾಳಶಾಹಿಗಳು ಗಾಂಧಿಯ ಈ ಪಾತ್ರದ ಪ್ರಾಮುಖ್ಯತೆಯನ್ನು ಅರಿತಿದ್ದರು. ಆದ್ದರಿಂದಲೇ ಗಾಂಧಿಗೆ ಧನ ಸಹಾಯ ಮಾಡಿದರು. ಅದೇ ರೀತಿ ಇತರ ಅನೇಕ ಬಂಡವಾಳಶಾಹಿಗಳೂ ಮಾಡಿ

ದರು. ಗಾಂಧಿಯಲ್ಲಿ ಇತ್ತೆಂದು ಹೇಳಲಾದ ಮುಸ್ಲಿಂಪ್ರೇಮ, (ಇದು ಪ್ರಾಮಾಣಿಕವಾದದ್ದೆಂದು ಮುಸ್ಲಿಮರು ಎಂದೂ ಭಾವಿಸಿರಲಿಲ್ಲ) ಅಗ್ಗದ ಪ್ರಚಾರವನ್ನು ಗಿಟ್ಟಿಸುವುದರ ಕಡೆ ಆಸಕ್ತವಾಗಿತ್ತು. ಆಳುವ ಜಾತಿ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸುವುದಾಗಿತ್ತು.ದಲಿತರಾದ ನಮ್ಮನ್ನು ಸದೆಬಡಿಯಲು ಅವರು ಮುಸ್ಲಿಮರ ಸಹಾಯವನ್ನು ಕೋರಿದರು. ಹಿಂದೂಗಳು ಮುಸ್ಲಿಮರು ಸಹೋದರರೆಂದು ಹೇಳುವುದನ್ನು ಬಿಟ್ಟರೆ ಆ ಸಹೋದರತ್ವವನ್ನು ಗಟ್ಟಿಗೊಳಿಸಲು ಅವರು ಏನನ್ನೂ ಮಾಡಲಿಲ್ಲ. ಇಂಡಿಯಾ ಮತ್ತು ಪಾಕಿಸ್ತಾನದ ವಿಭಜನೆಯನ್ನು ನಿಲ್ಲಿಸಲು ಅವರಿಗೆ ಆಗಲಿಲ್ಲ ; ಇಷ್ಟೇ ಅಲ್ಲ, ಭಾರತದಲ್ಲಿ ಮುಸ್ಲಿಮರ ಹತ್ಯೆಯನ್ನು ಅವರಿಗೆ ತಡೆಗಟ್ಟಲಾಗಲಿಲ್ಲ. ಈ ಹತ್ಯೆಗಳು ವರ್ಷ ಉರುಳಿದಂತೆ ದಿನೇ ದಿನೇ ಹೆಚ್ಚುತ್ತಿವೆ.

ಬ್ರಾಹ್ಮಣಮತ ಇರುವವರೆಗೆ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಪ್ರತ್ಯೇಕ ರಾಷ್ಟ್ರವೆಂದು ಹೇಳುತ್ತದೆ. ಮುಸ್ಲಿಮರನ್ನು ಹೊಡೆಯುವವರೆಗೆ ಆರೆಸೆಸ್ ಮತ್ತು ಇತರ ಹಿಂದೂ ಯುದ್ಧಪ್ರಿಯರು ಹಿಂದೂ ಏಕತೆಯನ್ನು ಘೋಷಿಸಲು ಸರಾಗವಾಗುತ್ತದೆ. ಜಾತಿಪದ್ಧತಿಯಿಂದ ಒಡೆದು ಹೋಗಿರುವ ಹಿಂದೂಗಳನ್ನು "ಮುಸ್ಲಿಂ ದ್ವೇಷ"ದ ಮುಖ್ಯದಿಂದ ಮಾತ್ರವಲ್ಲದೆ, ಆರೆಸೆಸ್ ಮತ್ತಾವ ಸಮಸ್ಯೆಯಿಂದ ಹಿಂದೂಗಳನ್ನು ಒಗ್ಗೂಡಿಸಲು ಸಾಧ್ಯ ? ಆದ್ದರಿಂದಲೇ ಮುಸ್ಲಿಂ ಸಮಸ್ಯೆ ಇರಬೇಕೆಂದು ಆರೆಸೆಸ್ ಬಯಸುತ್ತದೆ. ಈ 'ಶತ್ರು'ವನ್ನು ತೋರಿಸುತ್ತಾ ಅದು ತನ್ನ ಗುಲಾಮರ ಗಮನವನ್ನು ಬೇರೆಡೆಗೆ ಸೆಳೆದು ಅವರನ್ನೂ ದಲಿತರನ್ನೂ ಆಳುತ್ತಾ ಹೋಗುತ್ತದೆ. ಎಲ್ಲ ಕೋಮು ಗಲಭೆಗಳ ಹಿಂದಿರುವ ಒಳಸಂಚು ಇದು. ಇದನ್ನೇ ನಾವು ನಮ್ಮ ಪುಸ್ತಕದಲ್ಲಿ ವಿವರಿಸಿದ್ದೇವೆ. ಶೂದ್ರರೂ ದಲಿತರೂ ಬ್ರಾಹ್ಮಣ ನಾಯಕತ್ವವನ್ನು ಒಪ್ಪುವುದಿಲ್ಲ. ಅದರ ವಿರುದ್ಧ ದಂಗೆಯೇಳುತ್ತಾರೆ. ಅಂತಹ ದಂಗೆಯನ್ನು ತಡೆಗಟ್ಟುವ ಉದ್ದೇಶದಿಂದ ಕಾಲ್ಪನಿಕ ಶತ್ರುವನ್ನು ಅವರಿಗೆ ತೋರಿಸುತ್ತಾರೆ. ಜನಸಾಮಾನ್ಯರನ್ನು ಆಳಲು ಬ್ರಾಹ್ಮಣ ನಾಯಕತ್ವವನ್ನು ಸ್ಥಿರಪಡಿಸುತ್ತದೆ. ದಲಿತರೂ ಶೂದ್ರರೂ ಈ ಆಟವನ್ನು ಅರ್ಥಮಾಡಿಕೊಂಡು ಹಾರುವರ ಮೋಸವನ್ನು ಬಯಲು ಮಾಡುತ್ತಾರೆಂದು ನಾವು ಆಶಿಸುತ್ತೇವೆ.

ಗಾಂಧಿ ನಿಜವಾಗಿಯೂ ದೊಡ್ಡವರಾಗಿದ್ದರೆ, ಗಾಂಧಿವಾದ ಸಾಮಾಜಿಕ

ಬದಲಾವಣೆಯ ಒಂದು ತತ್ವವಾಗಿದ್ದರೆ ಭಾರತದ ಸಾಮಾನ್ಯ ಬಡ ಜನರು ಈ ತತ್ವವನ್ನೇಕೆ ಒಪ್ಪಿಕೊಳ್ಳಲಿಲ್ಲ ? ಸೋವಿಯತ್ ರಷ್ಯಾ ಮತ್ತು ಚೀಣಾ ಸಹ ತಮ್ಮದೇ ಆದ ಮಹಾತ್ಮರನ್ನು ಪಡೆದುಕೊಂಡಿದ್ದವು. ಲೆನಿನ್‌ವಾದ ಮತ್ತು ಮಾವೋವಾದಗಳನ್ನು ಅಲ್ಲಿನ ಜನರು ಒಪ್ಪಿಕೊಂಡರು. ಅವುಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಿದರು. ಎರಡೂ ದೇಶಗಳಲ್ಲಿಯೂ ಕ್ರಾಂತಿಯಾಯಿತು. ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಸುಧಾರಣೆ ಮೂಲಭೂತವಾಗಿ ನಡೆಯಿತು. ಆ ದೇಶಗಳ ಜನರು ಆ ವಾದಗಳನ್ನು ಅಂಗೀಕರಿಸಿದರು ; ಲೆನಿನ್ ಮತ್ತು ಮಾವೋವಾದದಿಂದ ತಾವು ಲಾಭಪಡೆದೆವೆಂದು ಇಡೀ ಪ್ರಪಂಚಕ್ಕೆ ತೋರಿಸಿದರು. ಚೀಣಾಕ್ಕೆ ಕೊಟ್ಟ ಭೇಟಿಯಿಂದ (1981) ಮಾವೋ ಮಾಡಿದ ಪವಾಡವನ್ನು ನಾವು ಕಣ್ಣಾರೆ ನೋಡುವಂತಾಯಿತು. ಯಾವುದೇ ಒಂದು ತತ್ವವನ್ನು ಅದು ತನಗೆ ಅನುಕೂಲಕರವಾಗಿದ್ದರೆ ಜನರು ಅಥವಾ ಒಂದು ಸಮಾಜ ಅಂಗೀಕರಿಸುತ್ತದೆಂದು ಇದರಿಂದ ಗೊತ್ತಾಗುವುದಿಲ್ಲವೆ ? ತಾವು ಬಯಸಿದಂತಹ ಸರ್ಕಾರವನ್ನು ಜನರು ಪಡೆಯುತ್ತಾರೆ ಎಂದು ಹೇಳುವಂತೆ ಅವರು ಆಶಿಸಿದಂತಹ ನಾಯಕ ಅವರಿಗೆ ದೊರಕುತ್ತಾನೆ. ಚೀಣೀಯರು ಮಾವೋವನ್ನು ಪಡೆದರು; ಹೃದಯಶಃ ಅಪ್ರಾಮಾಣಿಕರಾದ ಭಾರತೀಯರು ಗಾಂಧಿಯನ್ನು ಮತ್ತು ಕಪಟ ಗಾಂಧಿವಾದವನ್ನು ಪಡೆದರು. ಬಡಜನರ ರಕ್ತವನ್ನು ತಲೆತಲಾಂತರದಿಂದ ಹೀರುತ್ತಿರುವ ಶೋಷಕರನ್ನು ಅದು ಮರೆಮಾಚುವುದನ್ನು ಬಿಟ್ಟರೆ ಗಾಂಧಿವಾದದಿಂದ ಹೇಗೆ ಭಾರತಕ್ಕೆ ಸಹಾಯವಾಗಿದೆ ? ಆಳುವ ವರ್ಗಕ್ಕೆ ಗಾಂಧಿ ಅನುಕೂಲಕರವಾದ ಉಪಕರಣವಾದರು. ಗಾಂಧಿವಾದದ ಕೆಲವು ಆರ್ಥಿಕ ಅಂಶಗಳು ನಿಜವಾಗಿಯೂ ಚೆನ್ನಾಗಿವೆ. ಆದರೆ ಆಳುವ ವರ್ಗ ಅವುಗಳನ್ನು ಹೆಸರಿಸುತ್ತಿಲ್ಲ. ಏಕೆಂದರೆ ಅವು ಅದರ ಹಿತಾಸಕ್ತಿಗೆ ವಿರುದ್ಧವಾಗಿವೆ.

ಗಾಂಧಿವಾದ ನಿಜವಾಗಿಯೂ ಚೆನ್ನಾಗಿದೆ. ಆದರೆ ಜನ ಅದನ್ನು ಅನುಷ್ಠಾನಗೊಳಿಸದಿದ್ದರೆ ನಾವೇನು ಮಾಡಲು ಸಾಧ್ಯ ? ಎಂದು ಆಳುವ ವರ್ಗ ಕುಂಟು ನೆಪ ಹೇಳುತ್ತಿದೆ. ತಮಗೆ ನಿಜವಾಗಿಯೂ ಒಳ್ಳೆಯದಾಗುವಂಥದು ಇದ್ದರೆ ಜನರು ಅದನ್ನು ನಿರಾಕರಿಸುವುದಿಲ್ಲ ಎಂಬುದೇ ನಮ್ಮ ಉತ್ತರ. ಇದು ಇತಿಹಾಸದ ಪಾಠ. ಗಾಂಧಿವಾದವನ್ನು ಜನರು ಕ್ರಾಂತಿವಿರೋಧಿ ಎಂದು ಪರಿಗಣಿಸಿದ್ದರಿಂದಲೇ

ಅದನ್ನು ತಿರಸ್ಕರಿಸಿದರು. ಆದರೆ ತಮ್ಮ ಹಿತಾಸಕ್ತಿಯನ್ನು ರಕ್ಷಿಸುವಂಥ ಕ್ರಾಂತಿ ವಿರೋಧಿ ತತ್ವದ ಅಗತ್ಯವಿದ್ದುದರಿಂದ ಭಾರತದ ಆಳುವ ವರ್ಗ ಅದನ್ನು (ಗಾಂಧಿವಾದವನ್ನು) ಅಪ್ಪಿಕೊಂಡಿದೆ. ಆದ್ದರಿಂದ ಜನರು ಗಾಂಧಿವಾದವನ್ನು ತಿರಸ್ಕರಿಸಿದರೆಂದು ಅವರನ್ನು ಆಕ್ಷೇಪಿಸುವಂತಿಲ್ಲ.

ಗಾಂಧಿ ಚಿತ್ರ ಮತ್ತು ಇನ್ನಿತರೆ ಪ್ರಚಲಿತ ಕತೆಗಳು ದೇಶದ ವಿಭಜನೆಯನ್ನು ಗಾಂಧಿ ವಿರೋಧಿಸಿದರೆಂದು ಹೇಳುತ್ತವೆ. ಆದರೆ ಗೋಡ್ಸೆ ಹೇಳುವ ಪ್ರಕಾರ ಸತ್ಯ ಬೇರೆ ರೀತಿ ಇದೆ. ಗೋಡ್ಸೆಯ ದೃಷ್ಟಿ ಸರಿಯೆಂದು ನಂಬಲು ಐತಿಹಾಸಿಕ ದಾಖಲೆ ಇದೆ : "1943ರಲ್ಲಿ ಗಾಂಧಿ ಉಪವಾಸ ಮಾಡುತ್ತಿದ್ದಾಗ, ಬೇರೆಯವರನ್ನು ಒಳಗೆ ಬಿಡದಿದ್ದಾಗ... ಅವರಿಗೆ ಅತ್ಯಂತ ಆಪ್ತರಾದ ಸಿ. ರಾಜಗೋಪಾಲಾಚಾರಿಯವರು ಗಾಂಧಿ ಕೋಣೆಗೆ ನುಸುಳಿದರು. ಪಾಕಿಸ್ತಾನದ ರಚನೆಗೆ ಗಾಂಧಿ ಒಪ್ಪಿಗೆ ನೀಡಿ ಜಿನ್ನಾನ ಜೊತೆ ಮಾತುಕತೆ ನಡೆಸಲು ರಾಜಾಜಿಗೆ ಅವಕಾಶ ಕೊಟ್ಟರು." (ಪುಟ 60) ಕತೆ ಕಟ್ಟುವುದು ಭಾರತೀಯರಿಗೆ ಲಾಭದಾಯಕ ಉದ್ದಿಮೆಯಾಗಿದೆ. ಗಾಂಧಿ ಅಂತಹ ಒಂದು ಕತೆ.

ದಕ್ಷಿಣದ ನರಿಯೆಂದೂ ತಮಿಳುನಾಡಿನ ಮಹಾ ಕುತಂತ್ರ ಹಾರುವನೆಂದೂ ಕುಖ್ಯಾತವಾಗಿರುವ ರಾಜಾಜಿ ಭಾರತದ ವಿಭಜನೆಯ ಪ್ರಾಮುಖ್ಯತೆಯನ್ನೂ ಅದರಿಂದ ಬ್ರಾಹ್ಮಣರಿಗೆ ಆಗುವ ಅನುಕೂಲಗಳನ್ನೂ ಮೊದಲು ಅರ್ಥಮಾಡಿಕೊಂಡವರಲ್ಲಿ ಪ್ರಮುಖರು. ಆರೆಸೆಸ್ ನೇತೃತ್ವದ ಸಂಪ್ರದಾಯ ಶರಣ ಬ್ರಾಹ್ಮಣರು ದೇಶದ ವಿಭಜನೆಯನ್ನು ವಿರೋಧಿಸಿದರು; ಆದರೆ ನೆಹರೂ ಮತ್ತು ರಾಜಾಜಿ ನೇತೃತ್ವದ "ಸಮಾಜವಾದಿ ಬ್ರಾಹ್ಮಣರು" ಅಖಂಡ ಸ್ವತಂತ್ರ ಭಾರತ ಇದ್ದರೆ ಶೂದ್ರರು ಮತ್ತು ದಲಿತರ ಉದಯೋನ್ಮುಖ ಆಕಾಂಕ್ಷೆಗಳನ್ನು ಹತ್ತಿಕ್ಕಲು ಹಾರುವರಿಗೆ ಸಾಧ್ಯವಾಗುವುದಿಲ್ಲವೆಂದು ಯೋಚಿಸಿದರು. ಕೆಳಜಾತಿಯವರು ಅತೃಪ್ತರಾಗಿ ಹತೋಟಿ ತಪ್ಪಿದಾಗ ಅವರು ತಮ್ಮ ಹಾಗೆ ಶೋಷಣೆಗೊಳಗಾದ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಜೊತೆ ಸೇರಿಕೊಂಡು ತಮ್ಮೆಲ್ಲರ ಏಕ ಶತ್ರುವಾದ ಹಾರುವರ ವಿರುದ್ಧ ಹೋರಾಡುವುದು ನಿಶ್ಚಯ. ಈ ಎಲ್ಲ "ಸಮಾಜವಾದಿ ಬ್ರಾಹ್ಮಣರು" ಆಗತಾನೆ ಪ್ರಕಟವಾಗಿದ್ದ (1940) ಡಾ॥ಅಂಬೇಡ್ಕರರ ಪ್ರಸಿದ್ಧ ಪುಸ್ತಕ "ಪಾಕಿಸ್ತಾನ ಅಥವಾ ವಿಭಜನೆ" ಓದಿ ಈ ಅಪಾಯವನ್ನು ಮುಂಗಂಡರು. ಮುಸ್ಲಿಮರನ್ನು ದೇಶ

ದಿಂದ ಓಡಿಸದ ಹೊರತು ಹಾರುವರಿಗೆ ಅಪಾಯ ತಪ್ಪಿದ್ದಲ್ಲ ಎಂದು ತಿಳಿದರು. ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ನೆರವಿನಿಂದ ದಲಿತರು ಕ್ರಾಂತಿಯನ್ನು ತಂದರೆ ದೇಶದ ಒಟ್ಟು ಜನಸಂಖ್ಯೆಯ ಶೇ. 5 ಕ್ಕಿಂತಲೂ ಕಡಿಮೆ ಇರುವ ಹಾರುವರು ಅದನ್ನು ನಾಶ ಮಾಡುವುದಿರಲಿ, ಹತ್ತಿಕ್ಕಲೂ ಆಗುವುದಿಲ್ಲ.

ಇದನ್ನು ಓದಿ ಕೆಲವು ಹಾರುವರು ಸಿಟ್ಟಾಗಬಹುದು. ಅವರು ಮಾನ ನಷ್ಟದ ಮೊಕದ್ದಮೆಗಳನ್ನು ಹಾಕಬಹುದು. ನಾವು ದ್ವೇಷವನ್ನೂ ಅತೃಪ್ತಿಯನ್ನೂ ಉಂಟುಮಾಡುತ್ತಿದ್ದೇವೆಂದು ಅವರು ಹೇಳಬಹುದು. ಹಿಂಸಾಚಾರವನ್ನು ನಾವು ಪ್ರಚೋದಿಸುತ್ತಿದ್ದೇವೆಂದೂ ಸಹ ಅವರು ಹೇಳಬಹುದು. ಆದರೆ ತಮ್ಮ ಜಾತಿಯ ಹಿತಾಸಕ್ತಿಗಳನ್ನು ಮೀರಿದಂತಹ ಅನೇಕ ಬ್ರಾಹ್ಮಣರು ಭಾರತದಲ್ಲಿ ಇದ್ದಾರೆ ಅವರೇ ಎಂ. ಎನ್. ರಾಯ್, ಡಿ. ಡಿ. ಕೋಸಾಂಬಿ, ಗೋರಾ, ಡಾ॥ ಎ. ಆರ್. ದೇಸಾಯಿ, ಇತರರು. ಆದ್ದರಿಂದ ಮೇಲಿನ ಮಾತುಗಳು ಸಂಕುಚಿತ ಮತಭಾವನೆಯ ಹಾರುವರಿಗೆ ಮಾತ್ರ ಅನ್ವಯವಾಗುತ್ತವೆ.

ಆದ್ದರಿಂದ ಆರೆಸೆಸ್ ಬ್ರಾಹ್ಮಣರಿಗಿಂತಲೂ 'ಸಮಾಜವಾದಿ ಬ್ರಾಹ್ಮಣರು' ನಮಗೆ ಹೆಚ್ಚು ಅಪಾಯಕಾರಿಯಾಗಿದ್ದಾರೆ. ಆರೆಸೆಸ್ ಹಾರುವರು ನಮ್ಮ ಬಹಿರಂಗ ಶತ್ರುಗಳಾದರೆ ಸಮಾಜವಾದಿ ಹಾರುವರು ಗುಪ್ತ ಶತ್ರುಗಳು. ಬಹಿರಂಗ ಶತ್ರುವಿಗಿಂತ ಗುಪ್ತಶತ್ರು ಯಾವಾಗಲೂ ಹೆಚ್ಚು ಅಪಾಯಕಾರಿ. ಬಹಿರಂಗ ಶತ್ರು ಸ್ಪಷ್ಟವಾಗಿ ಕಾಣಿಸುತ್ತಾನೆ, ಬೆದರಿಸುತ್ತಾನೆ, ಆದರೆ ಗುಪ್ತಶತ್ರು ತಲೆ ಮರೆಸಿಕೊಂಡು ನಮ್ಮ ಆತ್ಮೀಯ ಮಿತ್ರನಂತೆ ನಮ್ಮ ಬಳಿ ಬರುತ್ತಾನೆ. ಈ ಗುಪ್ತಶತ್ರುವಿನ ಬಗ್ಗೆ ಎಚ್ಚರವಿರಲಿ.

ದೇಶದ ವಿಭಜನೆಯಾದ ನಂತರದ ಬೆಳವಣಿಗೆಯನ್ನು ಗಮನಿಸಿದರೆ, ಮುಸ್ಲಿಮರೆಲ್ಲಾ ಒಟ್ಟಿಗೆ ಇಲ್ಲೇ ಇದ್ದರೆ ದಲಿತರಾದ ನಮಗೆ ಎಷ್ಟು ಪ್ರಯೋಜನವಾಗುತ್ತಿತ್ತೆಂದು ಅರ್ಥಮಾಡಿಕೊಳ್ಳಬೇಕಾಗಿದೆ. ದಲಿತರಾದ ನಾವು ಮುಸ್ಲಿಮರು ಕ್ರಿಶ್ಚಿಯನ್ನರು ಮತ್ತು ಶೂದ್ರರು ಜೊತೆ ಸೇರಿಕೊಂಡು ಈ ಶತ್ರುವಿನ ವಿರುದ್ಧ ಉಗ್ರ ಹೋರಾಟವನ್ನು ಮಾಡಬಹುದಿತ್ತು. ಆದರೆ ಅಯ್ಯೋ ! ವಿಭಜನೆಯಿಂದ ನಮ್ಮ ದನಿಕುಗ್ಗಿದೆ. ಜೊತೆಗೆ ಉಳಿದಿರುವ ಮುಸ್ಲಿಮರ ಮೇಲೆ ಹಲ್ಲೆ ನಡೆದು ಬಲಹೀನರಾಗಿದ್ದಾರೆ. ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರವಾಗಿರುವುದರಿಂದ ಹಿಂದೂಗಳು ಅವರನ್ನು ಪ್ರತ್ಯೇಕ ಜನರೆಂದು ಭಾವಿಸಿ ನೂರಾರು ಜನರನ್ನು ಕೊಲ್ಲುತ್ತಿದ್ದಾರೆ.

ಇದನ್ನು ಎಲ್ಲಿಯವರೆಗೆ ಮುಸ್ಲಿಮರು ಸಹಿಸುತ್ತಾರೋ ನಮಗೆ ಗೊತ್ತಿಲ್ಲ. ಮುಸ್ಲಿಮರು ತಮಗೆ ಒಂದು ಪ್ರತ್ಯೇಕ ನಾಡು ಬೇಕೆಂದು ಹೋರಾಟ ನಡೆಸಿದರೆ ಆಶ್ಚರ್ಯವಿಲ್ಲ. ಭಾರತದಲ್ಲಿ ನಾನಾ ಜನಾಂಗಗಳು ಇರುವುದರಿಂದ ಅಂತಹ ಬೇಡಿಕೆಯನ್ನು ಮುಂದಿಟ್ಟರೆ ನಮಗೆ ಆಶ್ಚರ್ಯವೆನ್ನಿಸುವುದಿಲ್ಲ. ನಮಗೆ ದಲಿತ ಸ್ಥಾನ, ಗಿರಿಜನರಿಗೆ ಜಾರ್ಖಂಡ, ಸಿಖ್ಖರಿಗೆ ಖಲಿಸ್ಥಾನಕ್ಕೆ ತಗಾದೆ ನಡೆಯುತ್ತಿರುವಾಗ ಹಲ್ಲೆಗೊಳಗಾಗಿರುವ ಮುಸ್ಲಿಮರು ತಮ್ಮದೇ ನಾಡಿಗೆ ತಗಾದೆ ಮಾಡಲು ಸರ್ವ ಹಕ್ಕೂ ಇದೆ.

ಅದು ಹಾಗಿರಲಿ, ದೇಶ ವಿಭಜನೆಯ ಹಿಂದಿರುವ ರಹಸ್ಯಗಳನ್ನು ಭಾರತೀಯ ಇತಿಹಾಸಕಾರರು ಇನ್ನೂ ಬಹಿರಂಗಗೊಳಿಸಿಲ್ಲ. ಈ ಇತಿಹಾಸಕಾರರು ಆಳುವ ವರ್ಗಕ್ಕೆ ಸೇರಿದವರಾದುದರಿಂದ ಅವರು ಸತ್ಯ ಹೇಳುತ್ತಾರೆಂದು ನಾವು ನಿರೀಕ್ಷಿಸುವಂತಿಲ್ಲ. ನಮ್ಮ ಇತಿಹಾಸಕಾರರು ಬಂದಾಗ ವಿಭಜನೆಯ ನಾಟಕದ ಹಿಂದಿರುವ ಪಿತೂರಿಯನ್ನು ಬಯಲು ಮಾಡದೆ ಸುಮ್ಮನಿರುತ್ತಾರೆಯೆ ? ಜವಾಹರಲಾಲ ನೆಹರೂ, ರಾಜಗೋಪಾಲಚಾರಿ ಮತ್ತು ಗಾಂಧಿಯ ಪಾತ್ರವನ್ನೂ ಕೂಡ ಬಹಿರಂಗಗೊಳಿಸಬೇಕಾಗಿದೆ.

ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ : ಮೂಲತಃ ಮುಸ್ಲಿಮರು ಪಾಕಿಸ್ತಾನದ ಬಗ್ಗೆ ಆಸಕ್ತರಾಗಿರಲಿಲ್ಲ. ಪಾಕಿಸ್ತಾನದ ಕಲ್ಪನೆಯ ಮೂಲ ಪಿತೃ ಜಿನ್ನಾ ಅಲ್ಲ; ಆವನು 1940ರಲ್ಲಿ ನಿಧಾನವಾಗಿ ಪರಿವರ್ತನೆಯಾದನು. ಇದು ಪಾಕಿಸ್ತಾನ ಹುಟ್ಟುವ ಕೇವಲ ಏಳು ವರ್ಷಗಳ ಮುನ್ನ ತಮಗೆ ಒಂದು ಸ್ವರ್ಗ ಬೇಕೆಂದು ಸಮಾಜವಾದಿ ಬ್ರಾಹ್ಮಣರು ಕಂಡುಕೊಂಡರು. ಈ ಸತ್ಯವನ್ನು ಬಹಿರಂಗಗೊಳಿಸಿದ್ದಕ್ಕಾಗಿ ನಾವು ಗೋಡ್ಸೆಯನ್ನು ಅಭಿನಂದಿಸುತ್ತೇವೆ.

ಇನ್ನೊಂದು ಸತ್ಯವನ್ನು ಹೊರಗೆಡಹಿದ್ದಕ್ಕಾಗಿ ಅವನನ್ನು ಅಭಿನಂದಿಸುತ್ತೇವೆ : "ಭಾರತದ ಸ್ವಾತಂತ್ರ್ಯ ಗಾಂಧಿಯಿಂದ ಲಭಿಸಿತು ಎಂದು ಹೇಳುವವರು ಕೃತಘ್ನರಾಗಿದ್ದಾರೆ. ಅಷ್ಟೇ ಅಲ್ಲ, ಸುಳ್ಳು ಇತಿಹಾಸವನ್ನು ಬರೆಯಲು ಪ್ರಯತ್ನಿಸುತ್ತಿದ್ದಾರೆ" (ಪುಟ 75). ಬ್ರಿಟಿಷರು ಭಾರತವನ್ನು ಬಿಡಲು ಬಯಸಿದ್ದರು. ಇಂಗ್ಲಂಡಿನಲ್ಲಿ ಲೇಬರ್ ಸರ್ಕಾರ ಬಂದದ್ದರಿಂದ ಅವರ ನಿರ್ಗಮನ ತ್ವರಿತವಾಗಿ ನಡೆಯಿತು, ಜೊತೆಗೆ ಕ್ರೈಸ್ತಧರ್ಮದ ಮೂಲಭಾವನೆ ಜನರ ಬೇಡಿಕೆಗಳನ್ನು ಈಡೇರಿಸುವುದಾಗಿತ್ತು. ಬ್ರಿಟಿಷರು ಕ್ರಿಶ್ಚಿಯನ್ನರಾದ್ದರಿಂದ ಅವರಲ್ಲೂ

ಪ್ರಾಟಿಸ್ಟೆಂಟ್ ಕ್ರಿಶ್ಚಿಯನ್ನರಾದುದರಿಂದ ಭಾರತದ ಸ್ವಾತಂತ್ರ್ಯ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಗಣಿಸಿದರು. ಈ ಸ್ವಾತಂತ್ರ್ಯದಿಂದ ಭಾರತದ ದಲಿತರು ಏನನ್ನು ಸಾಧಿಸಿದರು? "ವಿದೇಶಿ" ಸುಲಿಗೆಕೋರರಿಗೆ ಬದಲು ಈಗ "ಆರ್ಯ" ಸುಲಿಗೆಕೋರರನ್ನು ಪಡೆದಿದ್ದೇವೆ. [ಆರ್ಯರು ಭಾರತಕ್ಕೆ ಮೊದಲು ಬಂದ ದಾಳಿಕಾರರು. ಮೊದಲು ಬಂದವರು ಮೊದಲು ತೊಲಗಬೇಕು ಎಂಬ ತತ್ವವನ್ನು ಜಾರಿಗೊಳಿಸಿದರೆ ಈ ಆರ್ಯರು ಮೊದಲು ತೊಲಗಬೇಕಾಗುತ್ತದೆ. ಆದ್ದರಿಂದ ಈ ಆರ್ಯರು ಬ್ರಿಟಿಷರನ್ನು ಪರಕೀಯರೆಂದು ಕರೆಯದಿರಲಿ.]

ಕೊನೇಪಕ್ಷ ವಿದೇಶಿ ಸುಲಿಗೆಕಾರರು ಈ ಆರ್ಯರಿಗಿಂತ ಹೆಚ್ಚು ಉತ್ತಮರಾಗಿದ್ದರು. ಬ್ರಿಟಿಷರು ಇದ್ದುದರಿಂದಲೇ ಡಾ॥ ಅಂಬೇಡ್ಕರ್ ಅಂತಹ ಉನ್ನತ ವ್ಯಕ್ತಿತ್ವವನ್ನು ಸಾಧಿಸಲು ಸಾಧ್ಯವಾಯಿತು. ಈ ಕಾರಣದಿಂದಲೇ ಭಾರತ ಇನ್ನೊಬ್ಬ ಅಂಬೇಡ್ಕರನನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಈ ಬ್ರಾಹ್ಮಣ ರಾಜ್ಯದ ಕೈಕೆಳಗೆ ಯಾರುತಾನೆ ಬದುಕುವುದಿರಲಿ,ಉಸಿರಾಡಲು ಸಾಧ್ಯ? ಸ್ವಾತಂತ್ರ್ಯವನ್ನು ತಂದು ಕೊಟ್ಟರೆಂದು ಗಾಂಧಿಗೆ ಕೀರ್ತಿ ದಕ್ಕಿದರೂ ದಲಿತರಾದ ನಾವು ಈ ಸಾಧನೆಯಿಂದ ಅಷ್ಟು ರೋಮಾಂಚನಗೊಳ್ಳುವುದಿಲ್ಲ. ಪರ-ಆಳ್ವಿಕೆಗಿಂತ ಸ್ವ-ಆಳ್ವಿಕೆ ನಿಸ್ಸಂದೇಹವಾಗಿಯೂ ಉತ್ತಮ. ಆದರೆ ಈ ಸ್ವ-ಆಳ್ವಿಕೆಯಿಂದ ನಾವು ಏನನ್ನು ಸಾಧಿಸಿದ್ದೇವೆ ? ಈ ಆರ್ಯ ದಾಳಿಕಾರರನ್ನು ಹೊರಹಾಕಿ ದಲಿತ ರಾಜ್ಯವನ್ನು ನಾವು ಸ್ಥಾಪಿಸಿದರೆ ಆಗ ನಾವು ಸ್ವ-ಆಳ್ವಿಕೆಯನ್ನು ಸಾಧಿಸಿದಂತಾಗುತ್ತದೆ.

ಗೋಡ್ಸೆ ಪುಸ್ತಕದ ಐದನೆಯ ಭಾಗ ಈ ಧೀರ ವಾಕ್ಯದಿಂದ ಪ್ರಾರಂಭವಾಗುತ್ತದೆ: "ರಾಜಕೀಯ ರಂಗದಿಂದ ಗಾಂಧಿಯನ್ನು ನಿರ್ಮೂಲನ ಮಾಡಬೇಕೆಂದು ನಾನು ತೀರ್ಮಾನಿಸಿದ ದಿನ........"ಭಾರತದಲ್ಲಿ ತಾನು ಅತ್ಯಂತ ದ್ವೇಷಿಸಲ್ಪಡುವ ವ್ಯಕ್ತಿಯಾಗುತ್ತೇನೆಂದು ಆತನಿಗೆ ಗೊತ್ತಿತ್ತು. ಆ ಬಗ್ಗೆ ಅವನು ಸಂಪೂರ್ಣ ಪ್ರಾಮಾಣಿಕನಾಗಿದ್ದ. ಆದರೆ ಅವನಿಗೆ ತನ್ನ ಕೀರ್ತಿಗಿಂತಲೂ ಬ್ರಾಹ್ಮಣಧರ್ಮದ ಭವಿಷ್ಯ ಮುಖ್ಯವಾಗಿತ್ತು. "ಅರಮನೆಯಂತಹ ಬಿರ್ಲಾ ಮಂದಿರದಲ್ಲಿ ವಾಸಿಸುವ" ಗಾಂಧಿಯನ್ನು ಕಟುವಾಗಿ ಟೀಕಿಸುತ್ತಿದ್ದನು. ಭಾರತದ ಕೋಟ್ಯಾಧೀಶರು ಗಾಂಧಿಗೆ ಅಪಾರ ಹಣ ದಾನಮಾಡುತ್ತಿದ್ದರು. ಅವರು ಕಸ್ತೂರಿಬಾ ನಿಧಿ ಮತ್ತು ಇತರ ನಿಧಿಗಳನ್ನು ಸ್ಥಾಪಿಸಿ ಕೋಟ್ಯಾಂತರ ರೂಪಾಯಿಗಳನ್ನು ಸೆಳೆದರು. ಗಾಂಧಿ ಬುಟ್ಟಿಗೆ ಹಣ ಸುರಿಯುತ್ತಿದ್ದ ಆ

ಶ್ರೀಮಂತರು ಕೇವಲ ಮೂರ್ಖರಾಗಿದ್ದರೆ? ಅವರು ಮೂರ್ಖರಾಗಿದ್ದ ಪಕ್ಷ ದಲ್ಲಿ ಡಾ॥ಅಂಬೇಡ್ಕರ್‌ಗಾಗಲೀ ಅಥವಾ ನಮಗಾಗಲೀ ಏಕೆ ಕೊಡಲಿಲ್ಲ? ಗಾಂಧಿ ಎಲ್ಲೇ ಹೋಗಲಿ ಅವರನ್ನು ಸ್ವಾಗತಿಸಿ ಕೋಟ್ಯಾಧೀಶರ ನಡುವೆ ಮಂಡಿಸುವಂತೆ ಮಾಡುತ್ತಿದ್ದರು. ಅಂಬೇಡ್ಕರ್ ಇದನ್ನು ಆಗಲೇ ಹೇಳಿದ್ದರು; ಹಾಗೂ ಅಂತಹ ವಾಸ್ತವ ಸಂಗತಿಯ ಬಗ್ಗೆ ಅನೇಕ ಹಾರುವರು ಸಿಟ್ಟನ್ನು ವ್ಯಕ್ತಪಡಿಸಿದ್ದರು. ಇನ್ನೊಬ್ಬ ದಕ್ಷಿಣ ಭಾರತದ ಹಾರುವ (ಕೆ.ಸಂತಾನಂ, ದಿ ಹಿಂದೂಸ್ಥಾನ್ ಟೈಮ್ಸ್, ನ್ಯೂ ಡೆಲ್ಲಿ 1946, ಪುಟ 114) ಅಂಬೇಡ್ಕರ್ ಅವರ ಐತಿಹಾಸಿಕ ದಾಖಲೆಯಾದ "ವಾಟ್ ಕಾಂಗ್ರೆಸ್ ಅಂಡ್ ಗಾಂಧಿ ಹ್ಯಾವ್ ಡನ್ ಟು ಅನ್‌ಟಚೆಬಲ್ಸ್" (ಗಾಂಧಿ ಮತ್ತು ಕಾಂಗ್ರೆಸ್ ಅಸ್ಪೃಶ್ಯರಿಗೆ ಏನು ಮಾಡಿದ್ದಾರೆ?) ಎಂಬ ಪುಸ್ತಕದ ಬಗ್ಗೆ ಉಗ್ರವಾಗಿ ಖಂಡಿಸುವಂತೆ ಮಾಡಿದರು. ಈ ಪುಸ್ತಕದ ಬಗ್ಗೆ ಬರೆದದ್ದಕ್ಕಾಗಿ ನೆಹರೂ ಸಂಪುಟದಲ್ಲಿ ಸಂತಾನಂಗೆ ಅರ್ಥ ಸಚಿವ ಪದವಿ ಸಿಕ್ಕಿತು. ಆದರೆ ಅಂಬೇಡ್ಕರ್ ಈ ಸತ್ಯವನ್ನು ಹೇಳಿದಾಗ ಹಾರು ವರು ಕ್ರುದ್ಧರಾದರು. ಈಗ ಆ ಸತ್ಯವನ್ನು ಅಂದರೆ ಕೋಟ್ಯಾಧೀಶರು ಗಾಂಧಿಗೆ ಧನಸಹಾಯ ಮಾಡಿದರೆಂದು ಗೋಡ್ಸೆಯೇ ಹೇಳುತ್ತಿದ್ದಾನೆ. ಹಾರುವನೊಬ್ಬ ಅಸತ್ಯವನ್ನು ನುಡಿದರೂ ಯಾರೂ ಅದನ್ನು ವಿರೋಧಿಸುವುದಿಲ್ಲ. ಹಿಂದೂ ಆಳ್ವಿಕೆಯ ಗುಟ್ಟೆಂದರೆ ಬ್ರಾಹ್ಮಣ ಮಾತ್ರ ಸತ್ಯ ಹೇಳುತ್ತಾನೆ, ಸತ್ಯವನ್ನಲ್ಲದೆ ಬೇರೇನೂ ಹೇಳುವುದಿಲ್ಲ ಎಂದು ನಂಬಿಸುವುದೇ ಆಗಿದೆ.

"ಗಾಂಧಿ ಪಾಕಿಸ್ತಾನದ ಅತ್ಯಂತ ದೊಡ್ಡ ಪ್ರತಿಪಾದಕ ಮತ್ತು ಬೆಂಬಲಿಗ ರಾಗಿದ್ದರೆ"ಂದು ಗೋಡ್ಸೆಗೆ ಸಂಪೂರ್ಣ ಮನವರಿಕೆಯಾಗಿತ್ತು. ಅದಕ್ಕೆ ಪರಿ ಹಾರ ಗಾಂಧಿ ಕೊಲೆ ಎಂದು ಆತ ನಿರ್ಧರಿಸಿದ. ಹಾಗೆಯೆ ಮಾಡಿದ. ಅವನ ಪ್ರಾಮಾಣಿಕತೆಯನ್ನು ಮೆಚ್ಚಬಾರದೇಕೆ? ಗೋಡ್ಸೆಯ ಅಭಿಪ್ರಾಯವನ್ನು ನಾವು ಒಪ್ಪದಿರಬಹುದು; ಆದರೆ ಅವನ ಪ್ರಾಮಾಣಿಕತೆಯನ್ನು ಎಂದೂ ಅನು ಮಾನಿಸುವಂತಿಲ್ಲ. ತಾನು ಮಾಡಲು ನಿರ್ಧರಿಸಿದುದನ್ನು ಆತ ಮಾಡಿಯೇ ಬಿಟ್ಟ. ದಲಿತರು ಮುಸ್ಲಿಮರು ನಮ್ಮ ಸ್ನೇಹಿತರು ಎಂದು ಹೇಳಿ ಅವರ ಮೇಲೆ ಬೇಟೆ ನಾಯಿಗಳನ್ನು ಛೂ ಬಿಟ್ಟು ಅವರು ಆಕ್ರಮಣಕ್ಕೊಳಗಾದಾಗ ಮೊಸಳೆ ಕಣ್ಣೀರು ಸುರಿಸುವ "ಸಮಾಜವಾದಿ ಬ್ರಾಹ್ಮಣ"ರಂತೆ ಅಲ್ಲ.

ಆದ್ದರಿಂದ ಇವತ್ತಿಗೂ ಕೂಡ ಆರೆಸೆಸ್ ಮತ್ತು ಇತರ ಅನೇಕ ಬ್ರಾಹ್ಮಣರು

ಗೋಡ್ಸೆಯನ್ನು ಆರಾಧಿಸುತ್ತಾರೆ. ಗಾಂಧಿ ಕೊಲೆಯಾದಾಗ ಅವರು ಬಹಿರಂಗವಾಗಿ ಅತ್ತಿರಬಹುದು. ಆದರೆ ಅಂತರಂಗದಲ್ಲಿ ಗೋಡ್ಸೆಗೆ ಸಹಾನು ಭೂತಿ ವ್ಯಕ್ತಪಡಿಸಿದ್ದಾರೆ. ಪತ್ರಿಕೆಗಳಲ್ಲಿ ಮತ್ತು ಸಾರ್ವಜನಿಕವಾಗಿ ಸಾಕಷ್ಟು ಚರ್ಚೆ ಗಾಂಧಿ ಚಿತ್ರದ ಬಗ್ಗೆ ನಡೆಯುತ್ತಿದ್ದಾಗ ಯಾರೇ ಆಗಲಿ 'ಯಾರು ಗಾಂಧಿಯನ್ನು ಕೊಂದದ್ದು ಎಂದು' ಏಕೆ ಪ್ರಶ್ನಿಸಲಿಲ್ಲ? ಗಾಂಧಿಹತ್ಯೆಯನ್ನು ಸಮರ್ಥಿಸಲು ಅವರು ಅರ್ಜುನನಿಗೆ ಕೃಷ್ಣ ಹೇಳಿದ ಮಾತುಗಳನ್ನು ಉದ್ಧರಿಸಿದರು. ದ್ವೇಷ ಮತ್ತು ಸ್ವಾರ್ಥವಿಲ್ಲದೆ ಕೊಲೆ ಮಾಡುವುದು ಪವಿತ್ರವಾದದ್ದು ಎಂಬುದನ್ನು ಉದ್ಧರಿಸಿದರು. ಒಂದು ಪವಿತ್ರ ಕರ್ತವ್ಯವನ್ನು ಈಡೇರಿಸುವ ಸಲುವಾಗಿ ಗೋಡ್ಸೆ ಗಾಂಧಿಯನ್ನು ಕೊಂದನು. "ಮಾನವ ಜನಾಂಗದ ಲಾಭಕ್ಕಾಗಿ ಈ ಕೆಲಸವನ್ನು ನಾನು ಶುದ್ಧಾಂಗವಾಗಿ ಮಾಡಿದ್ದೇನೆ" (ಪುಟ : 112). "ಮಾನವ ಜನಾಂಗ" ಎಂದರೆ ಹಾರುವನಿಗೆ ತನ್ನ ಜಾತಿ ಮಾತ್ರ ಎಂದು ಅರ್ಥ. ಅಂದರೆ ಬ್ರಾಹ್ಮಣ ಮತವನ್ನು ಉಳಿಸಲು ಅವನು ಗಾಂಧಿಯನ್ನು ಕೊಂದನು. "ಅಂತಹ ಅಪರಾಧಿಯನ್ನು ಶಿಕ್ಷಿಸಲು ಯಾವುದೇ ನ್ಯಾಯಪದ್ಧತಿ ಇಲ್ಲದಿರುವುದರಿಂದ ಗಾಂಧಿಯನ್ನು ಕೊಲ್ಲಲು ನಾನು ಗುಂಡು ಹಾರಿಸಬೇಕಾಯಿತು" [ಪುಟ, 113]. ಇದನ್ನು ಒಪ್ಪದ ಹಾರುವ ಯಾರಾದರೂ ಇದ್ದಾರೆಯೋ? ಇದ್ದ ಪಕ್ಷದಲ್ಲಿ ಅದನ್ನು ವಿರೋಧಿಸಲು ಹೇಳಿಕೆ ನೀಡಿದ್ದಾರೆಯೇ? ಬದಲಿಗೆ ಗಾಂಧಿ ಹತ್ಯೆಯಾದ ಮೇಲೆ ಸಿಹಿ ಹಂಚಿ ಸಂತೋಷಪಟ್ಟಿದ್ದಾರೆ; ಇವತ್ತಿಗೂ ಆರೆಸೆಸ್ ಶಾಖೆಯ ಒಳಗಡೆ ಗಾಂಧಿ ಕೊಂದ ದಿನದಂದು ಅವರು ಸಿಹಿ ಹಂಚುತ್ತಾರೆ. ಗೋಡ್ಸೆ ಸಹಾನುಭೂತಿಯನ್ನು ಬಯಸಲಿಲ್ಲ. ಗಾಂಧಿ ಕೊಂದದ್ದನ್ನು ಆತ ಒಪ್ಪಿಕೊಂಡ ಹಾಗೂ ಅದಕ್ಕೆ ಕಾರಣಗಳನ್ನು ಧೈರ್ಯವಾಗಿ ಹೇಳಿದ.

ಒಟ್ಟಿನಲ್ಲಿ ವಿಭಜಿತ ಭಾರತ ಮತ್ತೆ ಒಂದಾಗುತ್ತದೆಂಬ ಆಶಯವನ್ನು ಆತ ವ್ಯಕ್ತಪಡಿಸಿದ್ದಾನೆ. ಅದು ನಿಜವಾಗಿಯೂ ಒಂದು ಅದ್ಭುತ ಕನಸು. ಆದರೆ ಪಾಕಿಸ್ತಾನ ಒಡೆದು ಎರಡಾಯಿತು. ಬಾಂಗ್ಲಾದೇಶ ಅಸ್ತಿತ್ವಕ್ಕೆ ಬಂದಿದೆ.

ನಮ್ಮ ಅಭಿಪ್ರಾಯ ಇದು : ಗಾಂಧಿಗಿಂತ ಕೆಟ್ಟ ನಾಯಕರನ್ನು ಈ ದೇಶ ಕಂಡಿದೆ. ಆದರೆ ಆರೆಸೆಸ್ ಏಕೆ ಅವರನ್ನು ಕೊಲ್ಲಲಿಲ್ಲ? ಅವರು ಬ್ರಾಹ್ಮಣರಾಗಿದ್ದು ಕಾರಣವೆ? ಆರೆಸೆಸ್ ಏಕೆ ತನ್ನ "ಪ್ರಾಮಾಣಿಕ" ನೀತಿಯನ್ನು ಬದಲಿಸಿತು? ಏಕೆ ಗಾಂಧಿ ಕೊಲೆಗಾರರೇ ಗಾಂಧಿ ಅಭಿಮಾನಿಗಳಾಗಿದ್ದಾರೆ? ಅಷ್ಟೇ ಅಲ್ಲ ; ಗಾಂಧಿ

ಮತ್ತು ಗಾಂಧಿವಾದದ ರಕ್ಷಕರಾಗಿದ್ದಾರೆ ? ಪ್ರತಿಯೊಬ್ಬ ಕ್ರಾಂತಿಕಾರಿಯನ್ನು ಜೀವಂತವಾಗಿ ಕೊಂದು ಅವನನ್ನು ಸಂಪೂರ್ಣವಾಗಿ ನಾಶಮಾಡಿ, ಸತ್ತ ನಂತರ ಅವನನ್ನು ಪೂಜಿಸುವ ಬ್ರಾಹ್ಮಣತತ್ವವನ್ನು ಅವಲಂಬಿಸಿದೆಯೆ ? ಇದನ್ನು ಅವರು ಬುದ್ಧನಿಗೂ ಗಾಂಧಿಗೂ ಮಾಡಿದರು. ಈಗ ಅಂಬೇಡ್ಕರ್ ತತ್ವವನ್ನು ಮುಗಿಸಲು ಪ್ರಯತ್ನಿಸುತ್ತಿದ್ದಾರೆ.

"ಚಿಂತನ ಗಂಗಾ" ಎಂಬ ಆರೆಸೆಸ್ ಬೈಬಲ್‌ನಿಂದ ನಿರ್ದೇಶಿತವಾಗಿರುವ ನೀತಿ ಹೇಗೆ "ಗಾಂಧಿ ಸಮಾಜವಾದ"ವನ್ನು ತನ್ನ ರಾಜಕೀಯ ತತ್ವವನ್ನಾಗಿ ಅಂಗೀಕರಿಸಲು ಸಾಧ್ಯ? ಈ ವಿಷಯದಲ್ಲಿಯೂ ಆರೆಸೆಸ್ ತನ್ನ "ಪ್ರಾಮಾಣಿಕ" ನೀತಿಯಿಂದ ದೂರ ಸರಿಯುತ್ತಿದೆಯೇ ? ಇಂದಿರಾಗಾಂಧಿಯವರ ದ್ವಂದ್ವನೀತಿ, ದ್ವಂದ್ವನುಡಿ ಮತ್ತು ದ್ವಂದ್ವನಡೆಯನ್ನು ಅನುಸರಿಸುತ್ತಿದೆಯೇ ? ಹೀಗೆ ಮಾಡುವುದರಿಂದ ಅದಕ್ಕೆ ಮತಗಳಿಕೆಯಲ್ಲಿ ಲಾಭವಿದೆಯೇ ? ಅಥವಾ ಇಂದಿರಾಗಾಂಧಿಯನ್ನು ಆರೆಸೆಸ್ ತತ್ವಕ್ಕೆ ಎಳೆದುಕೊಂಡು ಅವರನ್ನು ಹಿಂದೂ ನಾಯಕಿಯನ್ನಾಗಿ ಮಾಡುವ ಕುತಂತ್ರವೆ? ಅದೇನೇ ಇರಲಿ, ಆರೆಸೆಸ್ ಮತ್ತು ಇಂದಿರಾಗಾಂಧಿ ಭಾರಿ ಪ್ರಮಾಣದಲ್ಲಿ ಬದಲಾಗುತ್ತಿದ್ದಾರೆ. ಯಾರು ಯಾರನ್ನು ಕಬಳಿಸುತ್ತಾರೆಂದು ಕಾದು ನೋಡಬೇಕು.

✱

# ಹಿನ್ನುಡಿ

## ಭಾರತದ ಇತಿಹಾಸ: ಗೋಡ್ಸೆಗಳಿಗೂ ಗಾಂಧಿಗಳಿಗೂ ನಡೆಯುವ ಹೋರಾಟದ ಪುನರಾವರ್ತನೆ

ಈ ಪುಸ್ತಿಕೆಯನ್ನು ಗೋಡ್ಸೆ ಅಥವಾ ಆರೆಸೆಸ್ ಮೇಲಣ ತೀರ್ಪೆಂದು ಪರಿಗಣಿಸಬಾರದು; ಆದರೆ ಹೊಸ ಹೊಸ ರೂಪಗಳನ್ನು ತಾಳುತ್ತಿರುವ ಹಿಂದೂ ಪುನರುತ್ಥಾನ ಶಕ್ತಿಯ ಸೂಚಕವೆಂದು ತಿಳಿಯಬೇಕು. ಹಿಂದೂ ಮುದ್ರೆ ಕಳೆದ ಮಾರ್ಕ್ಸ್‌ವಾದ ಕೂಡ ಅನೇಕ ವೇಳೆ ಈ ಪುನರುತ್ಥಾನದ ಪ್ರಯತ್ನದಂತೆ ಕಾಣುತ್ತದೆ. ಈ ಹೊಂದಾಣಿಕೆಯೆ ಈ ಭಯಂಕರ ಹಿಮ್ಮೆಟ್ಟುವಿಕೆಯೆ. (Resilience) ಹಿಂದೂಧರ್ಮವು ಪ್ರತಿಯೊಂದು ಭೂಕಂಪನವನ್ನು ಸಹಿಸಿಕೊಳ್ಳುವಂತೆ ಮಾಡುತ್ತಿದೆ.

ಅದಕ್ಕೆ ಹೊಸ ಜೀವಶಕ್ತಿಯನ್ನು ಕೊಡುತ್ತಿರುವವರು ಗಾಂಧಿಗಳೇ ಹೊರತು ಗೋಡ್ಸೆಗಳಲ್ಲ. ಹಿಂದೂಧರ್ಮ ಅಪಾಯಕ್ಕೆ ಗುರಿಯಾದಾಗಲೆಲ್ಲಾ ಒಬ್ಬ ಗಾಂಧಿಯನ್ನು ಸೃಷ್ಟಿಸುತ್ತದೆ. ಆದ್ದರಿಂದ ಇದನ್ನು ಹಿಂದೂ ಇತಿಹಾಸದ ಎರಡು ಮುಖ್ಯ ಪ್ರವೃತ್ತಿಗಳನ್ನು ಕುರಿತ ಕೃತಿಯೆಂದು ಭಾವಿಸಬೇಕೇ ಹೊರತು ಇಬ್ಬರು ಅಸಾಧಾರಣ ವ್ಯಕ್ತಿಗಳನ್ನು ವಿಶ್ಲೇಷಿಸುವ ಕೃತಿಯೆಂದು ಭಾವಿಸಬಾರದು. ಈ ಎರಡು ಶಕ್ತಿಗಳು, ಪ್ರಧಾನ ಒಲವುಗಳು, ಒತ್ತಡಗಳು ಹಿಂದೂ ಧರ್ಮ ಬದುಕಿರುವವರೆಗೂ ಇರುತ್ತವೆ.

ಸಂಪ್ರದಾಯವಾದಿ, ಪುನರುತ್ಥಾನವಾದಿ, ಹಿಮ್ಮುಖವಾದಿ, ಹಿಂದೂಗಳನ್ನು ಗೋಡ್ಸೆ ಪ್ರತಿನಿಧಿಸಿದರೆ, ಗಾಂಧಿ 'ಪ್ರಗತಿಪರ ಸಮಾಜವಾದಿ' ಧೋರಣೆಯನ್ನು ಪ್ರತಿನಿಧಿಸುತ್ತಾರೆ. ಇಬ್ಬರೂ ಹಿಂದೂ ಜಾತಿಪದ್ಧತಿಯ ಮೇಲಿನ ಶ್ರೇಣಿಗೆ ಸೇರಿದ್ದಾರೆ; ಶೇ. 10ಕ್ಕಿಂತ ಕಡಿಮೆ ಇರುವ ಹಿಂದೂ ಸಮಾಜದ ಜನರನ್ನು ಪ್ರತಿನಿಧಿಸುತ್ತಾರೆ. ಹಿಂದೂಧರ್ಮದ ಇತಿಹಾಸವೆಂದರೆ ಈ ಎರಡು ಶಕ್ತಿಗಳ ನಡುವಣ ಸತತ ಸಮರ. ಈ ಎರಡು ಶಕ್ತಿಗಳ ನಡುವಣ

'ಸಮರ'ವನ್ನು 'ಪ್ರಗತಿಪರ' ಮತ್ತು 'ಸಂಪ್ರದಾಯವಾದಿ' ಶಕ್ತಿಗಳ ನಡುವೆ ಗೋಚರವಾಗುವ 'ತಾತ್ವಿಕ ವ್ಯತ್ಯಾಸ'ವೆಂದು ಪ್ರತಿಪಾದಿಸುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದ ಇಂದಿರಾಗಾಂಧಿ, ಮಾರ್ಕ್ಸ್‌ವಾದಿ ಪಕ್ಷದ ಇ.ಎಮ್.ಎಸ್. ನಂಬೂದರಿಪಾಡ್, ಕಮ್ಯೂನಿಸ್ಟ್ ಪಕ್ಷದ ಲೆನಿನ್ ಪ್ರಶಸ್ತಿ ವಿಜೇತ ಎಸ್.ಎ. ಡಾಂಗೆ ಈ 'ಸಮಾಜವಾದಿ ಬ್ರಾಹ್ಮಣ'ರನ್ನು ಈಗ ಪ್ರತಿನಿಧಿಸುತ್ತಿದ್ದಾರೆ. 'ಸಂಪ್ರದಾಯವಾದಿ ಬ್ರಾಹ್ಮಣ'ರನ್ನು ಆರೆಸ್ಸೆಸ್ ಮುನ್ನಡೆಸುತ್ತಿದೆ.ಸ್ವಾರಸ್ಯಕರ ಸಂಗತಿ ಎಂದರೆ ಈ ಎರಡೂ ಬಣಗಳ ಮುಂದಾಳುತನವನ್ನು ಬ್ರಾಹ್ಮಣರೇ ವಹಿಸಿಕೊಂಡಿದ್ದಾರೆ ; ಯಾವ ಒಂದು ಗುಂಪು ಸೋತರೂ ಭಾರತದಲ್ಲಿ ಬ್ರಾಹ್ಮಣರ ಆಳ್ವಿಕೆಯೇ ಮುಂದುವರಿಯುತ್ತದೆ. ಈ ಎರಡೂ ಬಣಗಳ ನಡುವಣ ಸಮರ ತೀರ ಗಂಭೀರವಾಗಿದೆ. ಅದೇ ಆಳುವ ವರ್ಗ ನಡೆಸುತ್ತಿರುವ ಭಾರತದ ದಿನ ಪತ್ರಿಕೆಗಳನ್ನು ಓದುವವರಿಗೆ ಇದು ಅಪ್ಪಟ ತಾತ್ವಿಕ ವ್ಯತ್ಯಾಸ ಎಂಬ ಭಾವನೆ ಬರುತ್ತದೆ. ಹಾಗೂ ಮಾರ್ಕ್ಸ್‌ವಾದಿಗಳುಆರೆಸ್ಸೆಸ್ ವಿರುದ್ಧ ಹೋರಾಟ ನಡೆಸುತ್ತಿದ್ದಾರೆಂದು ಭಾವಿಸುತ್ತಾರೆ. ಆದರೆ ಅವರಿಬ್ಬರೂ ಭಾರತದ ನಾಯಕತ್ವವನ್ನು ಬ್ರಾಹ್ಮಣರ ಕೈಯಲ್ಲೇ ಉಳಿಸಲು ಒಗ್ಗಟ್ಟಾಗಿದ್ದಾರೆ. ಆದರೆ ಭಾರತದ ಬಹುಸಂಖ್ಯಾತ ವರ್ಗಕ್ಕೆ ಸೇರಿದ ದಲಿತರು, ಹಿಂದುಳಿದ ಜಾತಿ ವರ್ಗಗಳು, ಸುಲಿಗೆಗೆ ತುತ್ತಾದ ಅಲ್ಪಸಂಖ್ಯಾತರಾದ ಮುಸ್ಲಿಮರು, ಕ್ರೈಸ್ತರು, ಸಿಕ್ಖರು, ಬೌದ್ಧರು ಗೋಡ್ಸೆ ಮತ್ತು ಗಾಂಧಿ ನಡುವಣ ವ್ಯತ್ಯಾಸವನ್ನು ಭಾರತದಲ್ಲಿ ನಡೆಯುತ್ತಿರುವ "ತಾತ್ವಿಕ ಸಮರ" ಎಂದು ತಪ್ಪಾಗಿ ತಿಳಿದಿದ್ದಾರೆ. ಅವರು ಈ ತೀರ್ಮಾನಕ್ಕೆ ಬಂದು ಈ ಎರಡು ಬಣಗಳನ್ನು ಬೆಂಬಲಿಸುತ್ತಾರೆ. ಈ ಎರಡೂ ಬಣಗಳ ಪರವಾಗಿ ಹೋರಾಡುತ್ತಾರೆ. ಹೀಗೆ ಜನಸಾಮಾನ್ಯರು ಕಚ್ಚಾಡಿ ಸಾಯುವಾಗ ಆಳುವವರ್ಗ ತಾತ್ವಿಕ ಭಿನ್ನಾಭಿಪ್ರಾಯದ ಸೋಗನ್ನು ಹಾಕಿಕೊಂಡು ಒಗ್ಗಟ್ಟಾಗಿ ಉಳಿಯುತ್ತದೆ. ಈ ರೀತಿಯಲ್ಲಿ ಸಾವಿರಾರು ವರ್ಷಗಳಿಂದಲೂ ದಲಿತರು ಮತ್ತು ಶೋಷಿತಅಲ್ಪಸಂಖ್ಯಾತರು ಮೋಸಹೋಗಿದ್ದಾರೆ. ಭಾರತದಲ್ಲಿ ಯಾವ ತತ್ವವೂ ಇಲ್ಲ ; ಇಲ್ಲಿ ಆಳುವ ತತ್ವವೆಂದರೆ ಜಾತಿ ಮಾತ್ರ. ಮಾರ್ಕ್ಸ್‌ವಾದಿಗಳೂ ಕೂಡ ಅದನ್ನು ಬೆಂಬಲಿಸುತ್ತಾರೆ. ಗಾಂಧಿ ಮತ್ತು ಗೋಡ್ಸೆ ಇಬ್ಬರೂ ಸತ್ತು ಹೋಗಿರಬಹುದು ; ಆದರೆ ಈ ಎರಡೂ ಶಕ್ತಿಗಳು ಹಿಂದೂಧರ್ಮದ ಆದಿಯಿಂದಲೂ ಉಳಿದುಕೊಂಡು ಬಂದಿವೆ, ಹಿಂದೂಧರ್ಮ ಇರುವವರೆಗೂ ಉಳಿಯುತ್ತವೆ.

ಆದ್ದರಿಂದ ಈ ಪ್ರಬಂಧವು ಈ ಎರಡು ಶಕ್ತಿಗಳ ಸಾಮಾಜಿಕ ವಿಶ್ಲೇಷಣೆಯಾಗಿದೆ, ಈ ಇಬ್ಬರು ವ್ಯಕ್ತಿಗಳನ್ನು ಕುರಿತು ಯಾವುದೇ ಬಗೆಯ ಟೀಕೆಯಲ್ಲ. ಜನಸಾಮಾನ್ಯರನ್ನು ಮುಗ್ಧರನ್ನಾಗಿ ಮಾಡಿದ, ಗುಲಾಮರು ತಮ್ಮ ಗುಲಾಮಗಿರಿಯನ್ನು ಅನುಭವಿಸುವಂತೆ ಮಾಡಿದ ಗಾಂಧಿ ಮತ್ತು ಗೋಡ್ಸೆ ಅವರುಗಳ ಬಗ್ಗೆ ನಮಗೆ ಗೌರವವಿದೆ.

ಆರೆಸೆಸ್ ಎಂದರೆ ಒಂದು ವಿಚಾರ, ಸಂಘಟನೆಯಲ್ಲ. ಅದು ಹಿಂದೂ ಪುನರುತ್ಥಾನ ವಾದವನ್ನು ಪ್ರತಿನಿಧಿಸುತ್ತದೆ. ಏಕೆಂದರೆ ಈ ವಿಚಾರ ಆರೆಸೆಸ್ ಹುಟ್ಟುವ ಮೊದಲೇ (1925) ಅಸ್ತಿತ್ವದಲ್ಲಿತ್ತು. ಈ ವಿಚಾರ ಆರೆಸೆಸ್ ನಾಶವಾದ ನಂತರವೂ ಮುಂದುವರಿಯುತ್ತದೆ. ಯಹೂದಿ ಉಗಮವನ್ನು ಎತ್ತಿ ಹಿಡಿಯುವ, ಒಂದು ಸಣ್ಣ ಚಿತ್ತಪಾವನ ಬ್ರಾಹ್ಮಣ ಜಾತಿಗೆ ಸೇರಿದ ಗೋಡ್ಸೆ ಹಿಂದೂ ನಾಜಿಗಳ ಪ್ರತಿನಿಧಿಯಾಗುವುದರ ಮೂಲಕ ಕೇರಳದ ನಂಬೂದರಿ ಬ್ರಾಹ್ಮಣನಾದ ಆದಿಶಂಕರನ ಸಂಪ್ರದಾಯಗಳನ್ನು ಗಟ್ಟಿಗೊಳಿಸಿದನು. (ಕೇರಳಕ್ಕೆ ನಂಬೂದರಿಗಳು ಕ್ರಿ.ಶ. 700ರಲ್ಲಿ ಬಂದರು.) ಆದ್ದರಿಂದ ಗೋಡ್ಸೆಯೇ ಕೊನೆಯಲ್ಲ. ಜಮ್ಮು ಮತ್ತು ಕಾಶ್ಮೀರದ ಇತ್ತೀಚಿನ ಚುನಾವಣೆಗಳಲ್ಲಿಯೂ (1983) ಅವಕ್ಕೆ ಮುನ್ನ ದೆಹಲಿಯಲ್ಲಿ ನಡೆದ ಚುನಾವಣೆಗಳಲ್ಲಿಯೂ ಹಿಂದೂ ಪುನರುತ್ಥಾನದ ವಿಷಯದಲ್ಲಿ ಇಂದಿರಾಗಾಂಧಿಯವರು ಆರೆಸೆಸನ್ನು ಕೂಡ ಮೀರಿಸಿದ್ದಾರೆ.

---

† ಚಿತ್ತಪಾವನ ಬ್ರಾಹ್ಮಣರು ಮೂಲತ: ಯಹೂದಿಗಳು ಎಂಬ ಅಂಶವನ್ನು ಸಾಧಿಸಲು Sociology of Revivalism [ಪುನರುತ್ಥಾನವಾದದ ಸಾಮಾಜಿಕ ವಿಶ್ಲೇಷಣೆ] ಎಂಬ ತಮ್ಮ ಗ್ರಂಥದಲ್ಲಿ ಕೆ.ಕೆ.ಗಂಗಾಧರನ್ ಅವರು Illustrated Weekly of India [15.5.1970, ಪುಟ–6] ದಲ್ಲಿ ಪ್ರಕಟವಾದ Linda Cox ಅವರ ಲೇಖನದಿಂದ ಉದ್ಧರಿಸುತ್ತಾರೆ. ಹಾಗೂ ಚಿತ್ತಪಾವನ ಬ್ರಾಹ್ಮಣರು ಹೊರಗಿನಿಂದ ಬಂದವರೆಂಬುದನ್ನು ಇತಿಹಾಸಕಾರರು, ಮಾನವಶಾಸ್ತ್ರಜ್ಞರು ಕೂಡ ಖಚಿತ ಪಡಿಸುತ್ತಾರೆಂದು ಅವರು ಹೇಳುತ್ತಾರೆ. ಪುಟ–59] ಚಿತ್ತಪಾವನ ಪೀಳಿಗೆಯ ಇತಿಹಾಸಗಳನ್ನು ಅಧ್ಯಯನ ಮಾಡಿದ Maureen Patterson ಕೂಡ ಹೆಚ್ಚು ಕಡಿಮೆ ಇದೇ ತೀರ್ಮಾನಗಳಿಗೆ ತಲುಪಿದ್ದಾರೆಂದು ಹೇಳುತ್ತಾರೆ. [ಪುಟ-107]

ಪುನರುತ್ಥಾನದಿಂದ, ಗತಕಾಲವನ್ನು ವೈಭವೀಕರಿಸುವುದರ ಮೂಲಕ ಇತಿಹಾಸವನ್ನು ತಿರುಚುವುದರಿಂದ, ಮುಸ್ಲಿಮರು, ಕ್ರೈಸ್ತರು, ಸಿಖ್ಖರು,ಪಾರ್ಸಿಗಳು ನಿಮ್ಮ ನಿಜವಾದ ಶತ್ರುಗಳೆಂದು ಇತರ ಕೆಳ ಜಾತಿಯ ಹಿಂದೂಗಳಿಗೆ ಹೇಳುವುದರಿಂದ ಬ್ರಾಹ್ಮಣ ಧರ್ಮ ಬದುಕುತ್ತಿದೆ. ತನ್ನ ಶತ್ರುಗಳ ಪಟ್ಟಿಯಲ್ಲಿ ದಲಿತರನ್ನು (ಹರಿಜನರು, ಗಿರಿಜನರು) ಗೋಲ್ವಾಲ್ಕರ್ ಸೇರಿಸಿದ್ದರು. ರಾಕ್ಷಸರೆಂದು ಕರೆದು ಬ್ರಾಹ್ಮಣರು ನಡೆಸುತ್ತಿದ್ದ ಯುದ್ಧ ನಮ್ಮ ಮೇಲಣ ಯುದ್ಧವೇ ಆಗಿದೆ. ತಮ್ಮ ಕೃತಿ "ಚಿಂತನಗಂಗಾ"ದಲ್ಲಿ ಗೋಲ್ವಾಲ್ಕರ್ ಈ ರಾಕ್ಷಸರ ಬಗ್ಗೆ ಪದೇಪದೇ ಪ್ರಸ್ತಾಪಿಸುತ್ತಾರೆ, ಇಂದಿಗೂ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿರುವ ದಿನನಿತ್ಯದ ಜಗಳ ಹಿಂದೂಗಳಿಗೂ–ರಾಕ್ಷಸರಿಗೂ ನಡೆಯುವ ಯುದ್ಧದ ಮುಂದುವರಿದ ಭಾಗವಾಗಿದೆ, ಹಾಗೂ ರಾಕ್ಷಸರನ್ನು ನಿರ್ನಾಮ ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದೆ. ನಾವೇ ಈ ರಾಕ್ಷಸರು ಎಂಬ ಸಂಗತಿಯನ್ನು ಹೆಮ್ಮೆಯಿಂದ ಒಪ್ಪಿಕೊಳ್ಳೋಣ.

ಆದ್ದರಿಂದ ಈ ಪುಸ್ತಕ ದಲಿತರನ್ನು, ಇತರ ಶೋಷಿತ ಅಲ್ಪಸಂಖ್ಯಾತ ಸಹೋದರರನ್ನು. ಹಿಂದುಳಿದ ವರ್ಗಗಳನ್ನು ಎಚ್ಚರಿಸುವ ಒಂದು ನಮ್ರ ಪ್ರಯತ್ನವಾಗಿದೆ. ಹಿಂದೂ ಭಾರತ ಒಂದು ಸಂಕಷ್ಟದಿಂದ ಇನ್ನೊಂದು ಸಂಕಷ್ಟಕ್ಕೆ ಹೋಗುವಾಗ, ಆ ಸಂಕಷ್ಟ ಅಷ್ಟು ದೊಡ್ಡದಲ್ಲದಿದ್ದರೂ, ಈ ಪುನರುತ್ಥಾನವಾದ ಹೆಚ್ಚು ವೀರೋಚಿತ ರೂಪವನ್ನು ತಾಳುತ್ತದೆ. ಒಂದು ಗಂಭೀರ ಪುನರುತ್ಥಾನದ ವಿಪ್ಲವಕ್ಕಾಗಿ ಹಿಂದೂ ಇಂಡಿಯಾ ಸಾಗುತ್ತದೆಂದು ನಾವು ದೃಢಪಡಿಸಿಕೊಳ್ಳಬಹುದು. ಪುನರುತ್ಥಾನವಾದಿಗಳಿಗೂ ಮತ್ತು ಮಾರ್ಕ್ಸವಾದಿಗಳಿಗೂ ನಡೆಯುವ ಹೋರಾಟದಲ್ಲಿ ಮಾರ್ಕ್ಸವಾದಿಗಳು ಮೌನತಳೆಯುತ್ತಾರೆ, ತಟಸ್ಥವಾಗಿರುತ್ತಾರೆ. ಜಾತಿ ಮತ್ತು ಕೋಮುವಾದಿ ರಕ್ತಸ್ನಾನಕ್ಕಾಗಿ ಭಾರತ ಮುಂದುವರಿಯುತ್ತಿದೆ ; ಆಳುವ ವರ್ಗ ನಮ್ಮ ರಕ್ತಕ್ಕಾಗಿ ಹಾತೊರೆಯುತ್ತಿದೆ.

ದಲಿತರು ಮತ್ತು ಶೋಷಿತ ಅಲ್ಪಸಂಖ್ಯಾತರು ಈ ಪ್ರವಾಹವನ್ನು ತಡೆಗಟ್ಟುವ ಸ್ಥಿತಿಯಲ್ಲಿ ಇಲ್ಲದಿದ್ದರೂ, ಆಳುವವರ್ಗದ ಹಿಂಸೆಯಿಂದ ತಪ್ಪಿಸಿಕೊಳ್ಳಲು ನಾವು ಮುಂಜಾಗ್ರತೆಯನ್ನು ವಹಿಸಬೇಕಾಗಿದೆ. ಭಾರತದ ಮೂಲನಿವಾಸಿಗಳಾದ ನಾವು ಭಾರತವನ್ನು ವಿದೇಶೀ ಶೋಷಕರಿಂದ ಬಿಡುಗಡೆಗೊಳಿಸುವ

ದೊಡ್ಡ ಜವಾಬ್ದಾರಿ ಮತ್ತು ಸಮಾಜವಾದವನ್ನು ಸ್ಥಾಪನೆ ಮಾಡುವ ಹೊಣೆಗಾರಿಕೆ ನಮ್ಮದಾಗಿದೆ.

ನಮ್ಮ ಶತ್ರುವಿನ ಬಗೆಗಿನ ನಮ್ಮ ಗಾಢ ತಿಳುವಳಿಕೆ ಅಗತ್ಯವಾಗಿದೆ. ಏಕೆಂದರೆ ನಾವು ಹೋರಾಡಬೇಕಾದ ಶತ್ರು ಸಾಮಾನ್ಯ ಶತ್ರುವಲ್ಲ. ಪ್ರಪಂಚದಲ್ಲೇ ಅತ್ಯಂತ ಮೇಧಾವಿಗಳೆಂದು ಮಾನ್ಯರಾಗಿರುವ ಜರ್ಮನರನ್ನು ಮೋಸಗೊಳಿಸಿದ ಆರ್ಯರೇ ಅವರ ಪೂರ್ವಜರೆಂದು ನಂಬಿಸಿದ ಬಣ ಸಾಮಾನ್ಯವಲ್ಲ. ಸುಪ್ರಸಿದ್ಧ ಪ್ರಾಕ್ತನವಾದಿ ಮ್ಯಾಕ್ಸ್ ಮುಲ್ಲರ್ ಭಾರತವನ್ನು ತತ್ವಜ್ಞಾನಿಗಳ ರಾಷ್ಟ್ರ ಎಂದು ಕರೆದನು. ಜಗತ್ಪ್ರಸಿದ್ಧ ಜರ್ಮನಿಯ ತತ್ವಜ್ಞಾನಿ ಶೋಪೆನ್ ಹಾರ್ "ಮಾನವನ ಅತ್ಯುನ್ನತ ಬುದ್ಧಿ ಮತ್ತು ಜ್ಞಾನದ ಫಲವೇ ವೇದಗಳು" ಎಂದು ಹೇಳಿದ್ದಾನೆ. (ಕೆ.ಕೆ.ಗಂಗಾಧರನ್ ಅವರ Sociology of Revivalism ಪುಟ,35ರಲ್ಲಿ ಉದ್ಧೃತ). ಆದ್ದರಿಂದಲೇ ಹಾರುವರು ಹಿಟ್ಲರನ ಅತ್ಯಂತ ಕಟ್ಟಾಭಿಮಾನಿಗಳಾಗಿದ್ದಾರೆ, ಹಾಗೂ ಅವನು ಎರಡನೆಯ ಜಾಗತಿಕ ಯುದ್ಧದಲ್ಲಿ ವಿಜಯಿಯಾಗಬೇಕೆಂದು ಆಶಿಸಿ ಅವನಿಗೆ ಅಭಿನಂದನಾ ಸಂದೇಶಗಳನ್ನು ಕಳಿಸಿದರು. ಅವನು ಜಯಶೀಲನಾದರೆ ಅವನಿಗೆ ಕಲ್ಕತ್ತ, ಮದರಾಸು, ಪೂನಾ ಮತ್ತು ಭಾರತದ ಇತರ ಭಾಗಗಳಲ್ಲಿ ನಡೆಮುಡಿ ಹಾಸಲು ಅವರು ಯೋಜಿಸಿದ್ದರು. "ಜರ್ಮನರು ತಮ್ಮ ಅಸಾಧಾರಣ ಆಯುಧಗಳನ್ನು ನಮ್ಮ ಪವಿತ್ರ ಗ್ರಂಥಗಳು ಒದಗಿಸಿದ ಮಸಾಲೆಯಿಂದ ತಯಾರಿಸಿದರೆಂದು" ಬ್ರಾಹ್ಮಣರು ಹೇಳಿಕೊಂಡರು. (ಪವಿತ್ರಗ್ರಂಥಗಳೆಂದರೆ ಇಲ್ಲಿ ವೇದಗಳು, ಇತ್ಯಾದಿ ಗ್ರಂಥಗಳು) ಡಾ॥ಅಘೇನಂದ ಭಾರತಿಯವರು, ಹಿಂದೂಗಳು ಹಿಟ್ಲರನನ್ನು ಒಬ್ಬ ಮಹಾತ್ಮನೆಂದು ಪರಿಗಣಿಸಿದರೆಂದು ತಮ್ಮ "ಹಿಂದೂ ವಿದ್ವಾಂಸರು, ಜರ್ಮನಿ ಮತ್ತು ಥರ್ಡ್ ರೀಚ್" ಲೇಖನದಲ್ಲಿ [Update ಸಂ. 6, ಸಂ. 3, ಸೆಪ್ಟೆಂಬರ್ ೧೯೮೨, Arhus, Denmark]ಹೇಳುತ್ತಾರೆ. ತಮ್ಮ ಸ್ವಾಸ್ತಿಕ ಚಿನ್ಹೆಯನ್ನು ಹಿಟ್ಲರ್ ತೆಗೆದುಕೊಂಡು ಜರ್ಮನಿಯ ರಾಷ್ಟ್ರಧ್ವಜವನ್ನಾಗಿ ಮಾಡಿದ್ದನೆಂದು ಹೆಮ್ಮೆ ಪಡುತ್ತಾರೆ. ಜರ್ಮನಿಯ ಶಾಲೆಗಳಲ್ಲಿ ಸಂಸ್ಕೃತವನ್ನು ಕಡ್ಡಾಯ ವಿಷಯವನ್ನಾಗಿ ಮಾಡಿದ್ದಕ್ಕಾಗಿಯೂ ಬ್ರಾಹ್ಮಣರನ್ನು ಹಿಂಸಿಸುವ ಬ್ರಿಟಿಷರನ್ನು ದಂಡಿಸಲು ಹಿಟ್ಲರನ ಅವತಾರವಾಯಿತೆಂದೂ ಅವರು ಸಂತೋಷ ಪಟ್ಟರು. ಹೆಸರಾಂತ ಬ್ರಾಹ್ಮಣ ಪತ್ರಿಕೋದ್ಯಮಿಯೂ ಟೈಮ್ಸ್ ಆಫ್ ಇಂಡಿಯದ

ವಾಷಿಂಗ್‌ಟನ್ ಬಾತ್ಮೀದಾರರೂ, ಆಮೇಲೆ ಇಲ್ಲಸ್ಟ್ರೇಟೆಡ್ ವೀಕ್ಲಿ ಸಂಪಾದಕರೂ ಆದ ಎಂ.ವಿ.ಕಾಮತ್‌ರು ವಿಲ್‌ಹೆಲ್ಮ್‌ವಾನ್ ಪೊಕಾಮರ್ ಅವರ India's Road to Nationhood (Allied Publishers, Bombay) ಎಂಬ ಪುಸ್ತಕವನ್ನು ಇಂಡಿಯನ್ ಎಕ್ಸ್‌ಪ್ರೆಸ್ [March, 7, 1982] ಪತ್ರಿಕೆಯಲ್ಲಿ ವಿಮರ್ಶಿಸುತ್ತಾ ಜರ್ಮನರನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ತಿಲಕರೇ ಮುಂತಾದ ಬ್ರಾಹ್ಮಣ ಕ್ರಾಂತಿಕಾರಿಗಳನ್ನು ಕುರಿತು ಈ ಜರ್ಮನ್ ಲೇಖಕನ ಪ್ರಶಂಸೆಯನ್ನು ಉದ್ಧರಿಸುತಾರೆ. (ಹೆಚ್ಚಿನ ವಿವರಗಳಿಗೆ ಇಂಡಿಯಾದ ಹಾರುವರು ಹೇಗೆ ಜರ್ಮನರನ್ನು ಕೂಡ ಮೋಸಗೊಳಿಸಿದ್ದಾರೆ ಹಾಗೂ ಫ್ಯಾಸಿಸಂನ ಜನಕರಾಗಿದ್ದಾರೆ ಎಂಬುದನ್ನು ತಿಳಿಯಲು Leon Paliakov ಅವರ The Aryan Myth ಎಂಬ ಗ್ರಂಥವನ್ನು ಓದಿ. ಪ್ರಕಟಣೆ, New American Library, 1984).

ನಮ್ಮ ಶತ್ರುವಿನ ಕೌಶಲ ಈ ಬಗೆಯದಾಗಿರುವುದರಿಂದ ಅವನನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಎರಡನೆ ಜಾಗತಿಕ ಮಹಾ ಯುದ್ಧಕ್ಕೆ ಕಾರಣನಾದ ಹಿಟ್ಲರ್ ಮತ್ತು ಮುಸಲೋನಿಯನ್ನು ಸೃಷ್ಟಿಸಿದ ಪ್ರಪಂಚದ ಮೂಲವನ್ನೂ ಬೆಳವಣಿಗೆಯನ್ನೂ ಬ್ರಾಹ್ಮಣ ಮತದಲ್ಲಿ ಗುರುತಿಸಬಹುದು. Sociology of Revivalism (ಪುಟ, 100–2) ಎಂಬ ಗ್ರಂಥದಲ್ಲಿ ಗಂಗಾಧರನ್ ಅವರು ಹಿಟ್ಲರ್‌ವಾದಕ್ಕೂ ಆರೆಸೆಸ್ ವಾದಕ್ಕೂ ಇರುವ ಅದ್ಭುತ ಸಾಮ್ಯಗಳನ್ನು ವಿವರಿಸುತ್ತಾರೆ. ಫ್ಯಾಸಿಸಂನ ಜನಕರು ಭಾರತವನ್ನು ಆಕ್ರಮಣಮಾಡಿ ನಮ್ಮ ಮೇಲೆ ಬ್ರಾಹ್ಮಣ ಧರ್ಮವನ್ನು ಹೇರಿದ ಆರ್ಯರೇ ಹೊರತು ಜರ್ಮನರಲ್ಲ. ಹೀಗೆ ಸಹಜವಾಗಿಯೇ ಆರ್ಯರು ಪ್ರಪಂಚದ ಶತ್ರುಗಳಾಗಿದ್ದಾರೆ. ಅವರನ್ನು ಸೋಲಿಸುವ ಕಳಕಳಿ ನಮ್ಮದು ಮಾತ್ರವೇ ಆಗದೆ ಅಂತರ ರಾಷ್ಟ್ರೀಯ ಜವಾಬ್ದಾರಿಯಾಗುತ್ತದೆ.

ಅಂತಹ ಭಯಂಕರ ಜಾಗತಿಕ ಶತ್ರುವನ್ನು ಎದುರಿಸಲು ನಮ್ಮ ಶತ್ರುವಿನ ಫ್ಯಾಸಿಸ್ಟ್ ತತ್ವವನ್ನೂ ಅದರ ಪ್ರತಿನಿಧಿಗಳಾದ ಗೋಡ್ಸೆ ಮತ್ತು ಗಾಂ[illegible]ಗಳನ್ನೂ ಆಳವಾಗಿ ಅಧ್ಯಯನ ಮಾಡುವುದರಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಸಿದ್ಧರಾಗಬೇಕು. ಈ ಕೃತಿಯಲ್ಲಿ ಅಂತಹ ಒಂದು ನಮ್ರ ಪ್ರಯತ್ನ ನಡೆದಿದೆ. ಅದರ ರಹಸ್ಯಗಳನ್ನು ಬಯಲು ಮಾಡಲು ಸೂಕ್ತ ಯುದ್ಧ

ವಿಧಾನವನ್ನು ರೂಪಿಸಲು ಶತ್ರುವಿನ ಮತ್ತು ಅವನ ತತ್ವದ ಆಳವಾದ ಅರಿವು ಅತ್ಯಗತ್ಯವಾಗಿದೆ. ಆಗ ಮಾತ್ರ ನಾವು ನಮ್ಮ ಬಿಡುಗಡೆಯ ಹೋರಾಟವನ್ನು ಪ್ರಾರಂಭಿಸಬಹುದು.

ಪ್ರತಿಯೊಂದು ಸಾಮಾಜಿಕ ಚಳವಳಿಯು, ಅದು (ಸಾಂಪ್ರದಾಯಿಕ ಬ್ರಾಹ್ಮಣರ) ಗೋಡ್ಸೆವಾದವಾಗಲೀ ಅಥವಾ (ಸಮಾಜವಾದಿ ಬ್ರಾಹ್ಮಣರ) ಗಾಂಧಿವಾದವಾಗಲೀ ಒಂದು ಲೋಲಕದಂತಿದೆ. ಒಮ್ಮೆ ಅದು ಒಂದು ಅತಿಗೆ ಹೋದರೆ ಇನ್ನೊಮ್ಮೆ ಮತ್ತೊಂದು ಅತಿಗೆ ಹೋಗಲೇಬೇಕು. ಜೈನ ಮತ್ತು ಬೌದ್ಧ ಮತಗಳು ಆದಿಶಂಕರನಲ್ಲಿ ಒಬ್ಬ ಗೋಡ್ಸೆಯನ್ನು ಸೃಷ್ಟಿಸಿದವು. ವಿಧವೆಯರನ್ನು ನಿಷ್ಕರುಣವಾಗಿ ಸುಡುತ್ತಿದ್ದ ಹಿಂದೂ ಧರ್ಮವು ವಿವೇಕಾನಂದ ಮತ್ತು ರಾಜಾರಾಮ ಮೋಹನರಾಯನಲ್ಲಿ ಒಬ್ಬ ಗಾಂಧಿಯನ್ನು ಸೃಷ್ಟಿಸಿತು. ಆರೆಸೆಸ್ ಹುಟ್ಟುವುದಕ್ಕೆ ಬಹಳ ಮುಂಚೆಯೆ ಅದರ ಪೂರ್ವಜರನ್ನು ತಿಲಕ್, ಸಾವರ್ಕರ್, ದಯಾನಂದ ಸರಸ್ವತಿ, ಲಾಲಾಲಜಪತರಾಯ್ ಇವರಲ್ಲಿ ಕಾಣಬಹುದು. ಇವರೆಲ್ಲರೂ ಸಮಾಜವಾದವನ್ನು ವಿರೋಧಿಸಿ ಜಾತಿವ್ಯವಸ್ಥೆಯನ್ನು ರಕ್ಷಿಸಿದರು. ಹಿಂದೂ ಧರ್ಮಕ್ಕೆ ಶಾಪವಾಗಿರುವ ಪ್ರಜಾಪ್ರಭುತ್ವ ಮತ್ತು ಲೌಕಿಕವಾದ (ಸೆಕ್ಯೂಲರಿಸಂ)ವನ್ನು ಅವರು ತಿರಸ್ಕರಿಸುವಷ್ಟು ಪ್ರಾಮಾಣಿಕರಾಗಿದ್ದರು. ಈ ಅತಿಗೆ ಲೋಲಕ ಹೋದಾಗ ಪ್ರತಿಕ್ರಿಯೆ ಉಂಟಾಯಿತು. ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ (ಇದು ಬ್ರಿಟಿಷರನ್ನು ಓಡಿಸಿ ಹಾರುವ ಆಳ್ವಿಕೆಯನ್ನು ಸಂಸ್ಥಾಪಿಸುವ ಉದ್ದೇಶದಿಂದ ಪ್ರೇರಿತವಾಗಿದ್ದ ಚಳವಳಿ) ಸಮಾಜವು ಒಡೆದುಹೋಗಬೇಕಿತ್ತು; ಕ್ರಾಂತಿಯಾಗಲು ಕಾಲ ಕುದಿಯುತ್ತಿತ್ತು. ಆಗ ಕ್ರಾಂತಿಯನ್ನು ನುಚ್ಚುನೂರಾಗಿಸಲು ಹಿಂದೂ ಧರ್ಮವು ಗಾಂಧಿಯನ್ನು ಮೇಲಕ್ಕೆ ತಂದಿತು. ಗೋಡ್ಸೆವಾದವು ಕ್ರಾಂತಿಯನ್ನು ತೀವ್ರಗೊಳಿಸುತ್ತಿತ್ತು. ಚೀಣಾದಲ್ಲಿ ಆದಂತೆ ಭಾರತದಲ್ಲಿಯೂ ಒಂದು ಕ್ರಾಂತಿಯಾಗುತ್ತಿತ್ತು. ಆದರೆ ಕ್ರಾಂತಿವಿರೋಧೀ ಚಟುವಟಿಕೆಗಳಿಂದ ಗಾಂಧಿ ಅದನ್ನು ವಿಫಲಗೊಳಿಸಿದರು. ಆದ ರಿಂದ ಜಾತಿವರ್ಗ ವೈರುದ್ಯಗಳನ್ನು ಹಂತಗೊಳಿಸುವ ದೃಷ್ಟಿಯಿಂದಲೂ, ಜಡ್ಡುಗಟ್ಟಿರುವ ಹಿಂದೂ ಸಾಮಾಜಿಕ ತಿಪ್ಪೆಗುಂಡಿಯನ್ನು ಕಲಕುವ ಉದ್ದೇಶದಿಂದಲೂ ನಾವು ಗೋಡ್ಸೆಗಳನ್ನೂ ಗಾಂಧಿಗಳನ್ನೂ ಸ್ವಾಗತಿಸಬೇಕು.

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಇತರ ಮೇಲ್ಜಾತಿಯ

ಜನರು, ಆಳುವ ವರ್ಗವೂ ಸೇರಿದಂತೆ ಗಾಂಧಿಗೆ ಸದಾ ಋಣಿಯಾಗಿದ್ದಾರೆ. ಏಕೆಂದರೆ ಗಾಂಧಿ ಕ್ರಾಂತಿಯನ್ನು ತಡೆಗಟ್ಟಿದತು. ಆದ್ದರಿಂದಲೇ ಅವರನ್ನು "ರಾಷ್ಟ್ರಪಿತ" ಎಂದು ಕರೆಯಲಾಗಿದೆ.

ಹಿಂದೂ ಫ್ಯಾಸಿಸ್ಟ್ ಪಕ್ಷವಾದ ಆರೆಸೆಸ್ ಗಾಂಧಿಯನ್ನು ಕೊಂದಿತು. ಗಾಂಧಿಯನ್ನು ಕೊಂದಾಗ ಈ ಪಕ್ಷವು ಆರೆಸೆಸ್‌ನಲ್ಲಿರಲಿಲ್ಲ ಎಂದು ಇಂದು ನ್ಯಾಯಾಲಯದಲ್ಲಿ ವಾದಿಸಬಹುದು. ಆರೆಸೆಸ್ ಮನುಷ್ಯನೊಬ್ಬ ಯಾವುದೇ ಅಪರಾಧದಲ್ಲಿ ಸಿಕ್ಕಿಬಿದ್ದಾಗ ಅಂಥವನನ್ನು ಸಾರ್ವಜನಿಕವಾಗಿ ತ್ಯಜಿಸುವುದು ಅದರ ನಿಯಮ. ನ್ಯಾಯಾಧೀಶರು, ಪೊಲೀಸು, ಪತ್ರಿಕೆಗಳು ಮತ್ತು ಸರ್ಕಾರ ಎಲ್ಲವೂ ಹಿಂದೂಗಳಿಂದ (ಬ್ರಾಹ್ಮಣ) ನಿಯಂತ್ರಿತವಾಗಿರುವುದರಿಂದ ಗೋಡ್ಸೆಯನ್ನು ನಿರಪರಾಧಿಯೆಂದು ಹೇಳುವುದು ಅವರಿಗೆ ಸಹಜ. ಆದರೆ ಗಾಂಧಿಯನ್ನು ಕೊಂದದ್ದು ಆರೆಸೆಸ್ ಎಂಬುದನ್ನು ಭಾರತದಲ್ಲಿ ಒಂದು ಮಗು ಕೂಡ ಹೇಳುತ್ತದೆ. (ಅಮೆರಿಕೆಯ C. I. A. ಏಜೆಂಟರಾದ ಕ್ಯೂರನ್ ಅವರು ಆರೆಸೆಸ್ ಕುರಿತು ಬರೆದಿರುವ Militant Hinduism in Indian Politics ಎಂಬ ಗ್ರಂಥವನ್ನು ಹೆಚ್ಚಿನ ವಿವರಗಳಿಗಾಗಿ ಓದಬಹುದು.)

ಆರೆಸೆಸ್ ಜೊತೆ ನಾತುರಾಮ್ ಗೋಡ್ಸೆಯ ಸಂಬಂಧಗಳನ್ನು ತೋರಿಸಲು "ಸೋಬತ್" ಎಂಬ ಮರಾಠಿ ವಾರಿಕೆಯಲ್ಲಿ ಪ್ರಕಟವಾದ ಗೋಪಾಲ ಗೋಡ್ಸೆಯ ಲೇಖನಗಳನ್ನೂ, ಮೇನ್‌ಸ್ಟ್ರೀಮ್‌ನಲ್ಲಿ (ಜುಲೈ 1970) ಬಂದ ಎಸ್.ಎಸ್.ಕನೋಲ್ಕರ್ ಅವರ ಲೇಖನವನ್ನೂ ಕೆ.ಕೆ.ಗಂಗಾಧರನ್ ಉದ್ಧರಿಸುತ್ತಾರೆ: "ಗಾಂಧಿ ಹತ್ಯೆಯ ಮೊಕದ್ದಮೆಯಲ್ಲಿ ಸೆರೆವಾಸವನ್ನು ಅನುಭವಿಸಿದ ನಂತರ ಬಿಡುಗಡೆಯಾದ ಗೋಪಾಲ ಗೋಡ್ಸೆಯು ತಾನು ಮತ್ತು ಗೋಡ್ಸೆ ಆರೆಸೆಸ್‌ಗೆ ಸೇರಿದ್ದೇವೆಂದು ಘೋಷಿಸಿದ್ದಾನೆ. ಆ ವಿಷಯದಲ್ಲಿ ತುಂಬಾ ಹೆಮ್ಮೆ ಪಡುತ್ತಾನೆ. ಈ ವಿಷಯದಲ್ಲಿ ಪಲಾಯನವಾದಿ ಧೋರಣೆಯನ್ನು ತಳೆದ ಜನಸಂಘವನ್ನು ಆತ ಖಂಡಿಸುತ್ತಾನೆ. ತಾನು ಮತ್ತು ನಾತುರಾಮ್ ಗೋಡ್ಸೆ ಇಬ್ಬರೂ ಆರೆಸೆಸ್ ಸದಸ್ಯರಾಗಿದ್ದುದನ್ನು ಮತ್ತು ಗಾಂಧಿಯನ್ನು ಕೊಲೆ ಮಾಡಲು ತಾವೇ ಕಾರಣರೆಂದು ಧೀರವಾಗಿ ಸಮರ್ಥಿಸುತ್ತಾನೆ."

ಕೊಲೆಯಾದುದರಿಂದ ಗಾಂಧಿ ಹುತಾತ್ಮರಾದರು. ಹೀಗೆ ವೈದೃಶ್ಯದಿಂದ ಗಾಂಧಿ ಬೆಳಗುವಂತೆ ಆರೆಸೆಸ್ ಮಾಡಿತು. ಹಿಂದೂ ಧರ್ಮ ಅಪಾಯದಲ್ಲಿದ್ದಾಗಲೆಲ್ಲಾ ಒಬ್ಬ ಗೋಡ್ಸೆಯನ್ನೋ, ಒಬ್ಬ ಗಾಂಧಿಯನ್ನೋ ಸಹಜವಾಗಿ ಸೃಷ್ಟಿಸುತ್ತದೆ. ಇವರಿಬ್ಬರೂ ಪರಸ್ಪರ ಪೂರಕವಾಗಿದ್ದಾರೆ. ಗೋಡ್ಸೆ ಗಾಂಧಿಗೆ ನೆರವಾದನು. ಗಾಂಧಿ ಗೋಡ್ಸೆಗೆ ನೆರವಾದನು. ಗೋಡ್ಸೆ ಅಪಾಯಕಾರಿಯಾದರೆ ಗಾಂಧಿ ಹೆಚ್ಚು ಅಪಾಯಕಾರಿ. ಏಕೆಂದರೆ ಗಾಂಧಿ ಹಿಂದೂ ಧರ್ಮವನ್ನು ಕ್ರೋಢೀಕರಿಸುತ್ತಾರೆ. ವಾಸ್ತವವಾಗಿ ಇವರೇ ನಮ್ಮ ಸಹಜ ಬಹಿರಂಗ ಶತ್ರುಗಳು. ನಾವು ಸ್ಪಷ್ಟವಾಗಿ ಶತ್ರುವನ್ನು ಗುರುತಿಸಬಹುದು. ಅದು ನಮ್ಮನ್ನು ಹೆದರಿಸುತ್ತಾ ನಮ್ಮೆದುರಿಗೇ ನಿಂತಿದೆ. ಆದರೆ ಗಾಂಧಿವಾದಿಗಳು ಹೆಚ್ಚು ಅಪಾಯಕರ. ಏಕೆಂದರೆ ಅವರು ನಮ್ಮ ಬಳಿ ಸ್ನೇಹಿತರಂತೆ ಬಂದು ಮಂದವಿಷದಿಂದ ನಮ್ಮನ್ನು ಕೊಲ್ಲುತ್ತಾರೆ. ವೇಶಾಂತರ ವೈರಿಗಿಂತ ಬಹಿರಂಗ ಶತ್ರು ಉತ್ತಮ. ನಸುನಗುತ್ತಾ ಸಿಹಿತಿಂಡಿಗಳನ್ನು ಹಂಚುತ್ತಾ ಕೊಲೆ ಮಾಡುವುದು ಹೆಚ್ಚು ಅಪಾಯಕರ, ಉರಿಯುವ ಬೆಂಕಿಗೆ ಎಸೆಯುವುದಕ್ಕಿಂತ ಹೆಚ್ಚು ಕ್ರೂರವಾದದ್ದು. ಆದ್ದರಿಂದ ದಲಿತ ಮತ್ತು ಶೋಷಿತ ಅಲ್ಪಸಂಖ್ಯಾತರಿಂದ ಗೋಡ್ಸೆಗಳು ಹುಟ್ಟಬೇಕೆಂದು ನಾವು ಗೋಡ್ಸೆಗಳನ್ನು ಸ್ವಾಗತಿಸುತ್ತೇವೆ. ಗೋಡ್ಸೆಗಳು ನಮ್ಮನ್ನು ಕೋಪಿಷ್ಟರನ್ನಾಗಿ ಮಾಡಿದರೆ, ಗಾಂಧಿಗಳು ನಮ್ಮ ಸಿಟ್ಟನ್ನು ಸುಟ್ಟುಹಾಕಿ ನಮ್ಮ ಗುಲಾಮಗಿರಿಯನ್ನು ಸಂತೋಷದಿಂದ ಅನುಭವಿಸುವಂತೆ ಮಾಡುತ್ತಾರೆ.

ಅದೇನೇ ಆಗಲಿ, ನಾವು ವೈಜ್ಞಾನಿಕವಾಗಿ ನಮ್ಮ ಹೋರಾಟವನ್ನು ರೂಪಿಸಬೇಕು. ಭಾರತ ಬಿಡುಗಡೆಯಾಗಬೇಕಾದರೆ ಗೋಡ್ಸೆಗಳು ಮತ್ತು ಗಾಂಧಿಗಳು ಇಬ್ಬರೂ ನಿರ್ನಾಮವಾಗಬೇಕು. ಈ ಕಾರ್ಯವನ್ನು ಗಾಂಧಿಯುಗವೆಂದು ಹೆಸರಾಗಿರುವ ೨೦ನೆಯ ಶತಮಾನ ಕೊನೆಗಾಣುವುದಕ್ಕೆ ಮೊದಲೇ ಇನ್ನು ಕೇವಲ 17 ವರ್ಷಗಳಲ್ಲಿಯೇ ಮುಗಿಸಬೇಕು.

21 ನೆಯ ಶತಮಾನ ಅಂಬೇಡ್ಕರ್ ಯುಗವಾಗುತ್ತದೆ. ಇದನ್ನು ನಾವು ಮತ್ತೆ ಮತ್ತೆ ಹೇಳುತ್ತಿದ್ದೇವೆ. 21 ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ದಲಿತರು ಭಾರತದ ಕ್ರಾಂತಿಯ ನಾಯಕತ್ವವನ್ನು ವಹಿಸಬೇಕು. ಕಾಲ ಮೀಂಚಿ ಹೋಗುತ್ತಿದೆ. ಆದ್ದರಿಂದ ಅದನ್ನು ತ್ವರಿತಗೊಳಿಸಲು ನಾವು ದಲಿತರಿಗೆ

ಆಹ್ವಾನ ಕೊಡುತ್ತಿದ್ದೇವೆ. ದಲಿತ ಬುದ್ಧಿಜೀವಿಗಳು ದೊಡ್ಡಪಾತ್ರವ
ನಿರ್ವಹಿಸಬೇಕಾಗಿದೆ. ಅವರೇ ನಾಯಕತ್ವವನ್ನು ವಹಿಸಬೇಕಾಗಿದೆ.
ಸಂಗ್ರಾಮವನ್ನು ಶುರುಮಾಡುವ ಮುನ್ನ ಅವರು ಗೋಡ್ಸೆಗಳನ್ನೂ ಗಾ
ಗಳನ್ನೂ ಸರಿಯಾಗಿ ಅಧ್ಯಯನ ಮಾಡಬೇಕಾಗಿದೆ. ಅದಕ್ಕಾಗಿಯೇ "ಗಾ
ಯನ್ನು ಗೋಡ್ಸೆ ಏಕೆ ಕೊಂದ?" ಎಂಬ ಪುಸ್ತಕ ರಚಿತವಾಗಿದೆ.

ವಿ. ಟಿ. ರಾಜಶೇಖರ್ ೧೯೭೭ರ ವರೆಗೆ 'ಇಂಡಿಯನ್ ಎಕ್ಸ್‌ಪ್ರೆಸ್'ನ ಬೆಂಗಳೂರು ಶಾಖೆಯ ಉಪಪ್ರಧಾನ ವರದಿಗಾರರಾಗಿದ್ದರು. ಮಾರ್ಕ್ಸ್‌ವಾದಿ ಮತ್ತು ಅಂಬೇಡ್ಕರ್‌ವಾದಿಯೂ ಆದ ಅವರ ಅನೇಕ ಲೇಖನಗಳು ದೇಶ ವಿದೇಶಗಳ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಸಮೃದ್ಧ ಲೇಖಕರಾದ ಅವರು ಇಪ್ಪತ್ತು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹಲವು ಭಾರತೀಯ ಮತ್ತು ಐರೋಪ್ಯ ಭಾಷೆಗಳಿಗೆ ಅನುವಾದವಾಗಿವೆ. ಈಗ ಅವರು 'ದಲಿತ್ ವಾಯ್ಸ್' ಪಾಕ್ಷಿಕೆಯ ಸಂಪಾದಕರಾಗಿದ್ದಾರೆ. ಇದು ಅಸ್ಪೃಶ್ಯರು ಮತ್ತು ಇತರ ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಬೆಳಕಿಗೆ ತರುವ ಏಕೈಕ ಭಾರತೀಯ ಪತ್ರಿಕೆ ಎಂದು ಪರಿಗಣಿತವಾಗಿದೆ.

ಜಾತಿಪದ್ಧತಿ, ಹರಿಜನ, ಗಿರಿಜನ ಮತ್ತು ಇತರ ಶೋಷಿತ ಹಿಂದುಳಿದ ವರ್ಗಗಳ ಸಮಸ್ಯೆಯ ಜೊತೆಗೆ ಅವರು ಮುಸ್ಲಿಂ ಸಮಸ್ಯೆಯ ಬಗ್ಗೆ ಪರಿಣತಿಯನ್ನು ಪಡೆದಿದ್ದಾರೆ.

ಹರಿಜನರು, ಮುಸ್ಲಿಮರು ಮತ್ತು ಇತರ ಹಿಂಸಿತ ಹಿಂದುಳಿದ ವರ್ಗಗಳ ಸಮಸ್ಯೆಯನ್ನು ಎತ್ತಿಕೊಂಡದ್ದಕ್ಕಾಗಿ ೧೯೭೭ರಲ್ಲಿ ಅವರನ್ನು 'ಇಂಡಿಯನ್ ಎಕ್ಸ್‌ಪ್ರೆಸ್'ನಿಂದ ವಜಾಮಾಡಲಾಯಿತು. ಅಂದಿನಿಂದ ಅವರು 'ವರ್ಗವರ್ಣ ಸಂಘರ್ಷ' ಸಿದ್ಧಾಂತದ ಅಧ್ಯಯನದಲ್ಲಿ ನಿರತರಾಗಿದ್ದಾರೆ. ಇಂಡಿಯಾದಲ್ಲಿ ಕಮ್ಯೂನಿಸ್ಟ್ ಚಳವಳಿ ವಿಫಲವಾಗಿರುವುದರಿಂದ ಈ ತತ್ವ ಶೀಘ್ರಗತಿಯಲ್ಲಿ ಗಮನ ಸೆಳೆಯುತ್ತಿದೆ.

ಕರ್ನಾಟಕದ ಇಂಡಿಯಾ–ಚೀಣಾ ಮೈತ್ರಿ ಸಂಘದ ಪ್ರಥಮ ಅಧ್ಯಕ್ಷರಾಗಿ ಅವರು ೧೯೮೦ರಲ್ಲಿ ಚೀಣಾಕ್ಕೆ ಹೋದ ನಿಯೋಗದ ನೇತೃತ್ವ ವಹಿಸಿದ್ದರು. ಭಾರತೀಯ ಅಸ್ಪೃಶ್ಯರ ಪ್ರತಿನಿಧಿಯಾಗಿ ೧೯೮೩ರಲ್ಲಿ ಅವರು ಮತ್ತೆ ಚೀಣಾಕ್ಕೆ ಭೇಟಿಯಿತ್ತರು. ದಲಿತರು ಮುಸ್ಲಿಮರು ಕ್ರಿಶ್ಚಿಯನ್ನರು ಹಿಂದುಳಿದ ವರ್ಗಗಳು ಮಾರ್ಕ್ಸ್‌ವಾದಿಗಳು ಮತ್ತು ವಿಚಾರವಾದಿಗಳ ಅಖಿಲ ಭಾರತ ಮಟ್ಟದ ಎಲ್ಲ ಸಂಘಟನೆಗಳಲ್ಲಿ ಅವರು ಸಂಬಂಧ ಹೊಂದಿದ್ದಾರೆ.

**ಬೆಲೆ : ಎರಡು ರೂಪಾಯಿ**

ಸಮನ್ವಯ ಮುದ್ರಣಾಲಯ, ಸರಸ್ವತಿಪುರಂ ಮೈಸೂರು–9